7-00 P. M.

## Half-an-hour Discussion arising out of Replies to Starred Question No. 63 *re*: Fertilisers in the State Marketing Society

Mr. DEPUTY SPEAKER:—Now we shall take up Half-an-Hour Discussion.

Sri K. H. PATIL.—You cannot take up the Half-an-Hour discussion now, because as per Rule 49 this has to be taken up 'at the conclusion of the business of the day'. The business set down in the agenda for the day has not been concluded and so you cannot take up the half-an hour discussion now.

Mr. DEPUTY SPEAKER.—The normal working hours of the House are from 1 to 6 P.M. At 6 O'clock the time was extended by 1 hour up to 7 O'clock. Now it is 7 O'clock and so now even as per the rule that you have now cited the half-an-hour discussion can be taken up,

Sri K. H. PATIL.—But the business has not been concluded and so it cannot be taken up.

Mr. DEPUTY SPEAKER.—It can be taken up now.

† ಶ್ರೀ ಐ. ಸೋಮಶೇಖರಪ್ಪ.—ಈಗ ಅರ್ಧಗಂಟೆಯ ಚರ್ಚೆಯಲ್ಲಿ ಭಾಗವಹಿಸಲು ಶ್ರೀಯುತರುಗಳಾದ ಎಚ್. ಸಿದ್ದವೀರಪ್ಪ, ಎಸ್. ಗೋಪಾಲಗೌಡ, ಎಚ್. ಎಂ. ಚೆನ್ನಬಸಪ್ಪ ಮತ್ತು ಕೆ. ಎಚ್. ಪಾಟೀಲ್ ಅವರುಗಳು ತಮ್ಮ ಅನುಮತಿಯನ್ನು ಕೇಳಿದ್ದಾರೆ. ಅದಕ್ಕೆ ತಾವು ಒಪ್ಪಿದ್ದೀರಿ. ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಶ್ರೀ ಕೆ. ಎಚ್. ಪಾಟೀಲರಿಗೆ ಅವಕಾಶವಿಲ್ಲ. He is an interested party. ಏಕೆಂದರೆ ಅವರು ಗದಗ್‌ನಲ್ಲಿರುವ ಕಾಟನ್ ಸೇಲ್ಸ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ. ಮತ್ತು ಆ ಸೊಸೈಟಿಯ ಮೂಲಕ ಸುಮಾರು 7 ಲಕ್ಷ ರೂಪಾಯಿಗಳ ಗೊಬ್ಬರವನ್ನು ಮಾರಾಟ ಮಾಡಲಾಗಿದ್ದು, ಆ ಹಣದ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ. ಅಥವಾ ಮಿಸ್-ಅಪ್ಲಿಕೇಷನ್ ಆಗಿದೆ. ಈ ಬಗ್ಗೆ ಒಂದು ಕೇಸ್ ಹೈಕೋರ್ಟಿನ ಮುಂದೆ ಇದೆ. ಆದ್ದರಿಂದ ಮಾನ್ಯ ಪಾಟೀಲರು ಈ ಚರ್ಚೆಯಲ್ಲಿ ಭಾಗವಹಿಸಲು ಇಂಟರೆಸ್ಟ್‌ನಿಂದ ಇದ್ದಾರೆ. ಅವರಿಗೆ ಅವಕಾಶ ಕೊಡಬಾರದು. ಇಂತಹದ್ದೇ ಒಂದು ಸಂದರ್ಭ ಬಂದಾಗ ಮದರ್ ಆಫ್ ಪಾರ್ಲಮೆಂಟ್‌ನಲ್ಲಿ ಏನು ಡಿಸಿಷನ್ ತೆಗೆದುಕೊಂಡಿದ್ದಾರೆ ಎಂಬ ವಿಷಯವನ್ನು ನಭೆಯು ಮುಂದೆ ಇಡುತ್ತೇನೆ.' ಅದು ಈ ರೀತಿ ಇದೆ:

On 22nd June 1858 the House of Commons resolved:

> "That it is contrary to the usage and derogatory to the dignity of this House that any of its members should bring forward, promote or advocate in this House any proceeding or measure in which he may have acted or been concerned for or in consideration of any pecuniary fee or reward."

Sri K. H. PATIL.—Is it a point of order? He is an agent of the Government. He has stated facts contrary to truth.

Sri I. SOMASEKHARAPPA.—My point of order is that since he is an interested party he should be estopped from taking part in the discussion.

Sri K. H. PATIL.—No power on earth can stop me from taking part in the discussion here.

Sri G. DUGGAPPA.—I rise to a point of order. The hon. Member Sri Somasekharappa has raised certain points and he has made certain allegations. It is an accepted convention in this House that any hon. member who makes a statement in the House is responsible for that statement and he must prove it with facts and figures. Now I request the hon. member Sri Somasekharappa to produce before the House any documentary evidence or material in his possession to prove his statement. Otherwise he must withdraw the statement now made by him.

Sri I. SOMASEKHARAPPA.—I will clarify my statement.

Sri A. P. APPANNA (Deputy Minister for Industries).—Let us hear Mr. K. H. Patil whether he accepts this allegation or not.

Sri. K. H. PATIL.—I do not want any assistance from my friend Sri Duggappa.

Before I raise this half-an-hour discussion I want immediately to raise a privilege question against the hon. Member Sri Somasekharappa because he has stated in the House that Mr. K. H. Patil is the President of the Society. I am not at all the President of the Society. So by saying that I am the President of the Society he has misled the House. The second point that he said is that as President of the Society I am indebted to the Marketing Society to the tune of Rs. 7 lakhs. This is also absolutely incorrect. For these two incorrect statements made about me in the House I raise a privilege question against the said hon. Member because he has made these statements wilfully. This is a false statement because he is a Director of the Marketing Society and he should be aware of the position. While making a statement he must be responsible for its accuracy and correctness. He has acted as an agent of the Government in trying to see that the House does not hear Mr. K. H. Patil so that he may get an honour for himself. Therefore I am raising this privilege motion against him. Let my privilege motion be taken up right now immediately. It need not necessarily have any prior notice because the incident has happened on the floor of the House just now in the presence of the Speaker and the other members both on this side and the other side of the House. I deny all the allegations made by him as a responsible member. I am not the President of any Society which has misappropriated funds. If he has any concrete example before him, let him prove.

Mr. DEPUTY SPEAKER.—It is very difficult for the Chair to decide when there are two different versions.

Sri H. SIDDAVEERAPPA.—The point of order that has been raised by the hon. Member Sri Somasekharappa is clear. He also quoted May's Parliamentary practice in support of his point of order. I am unable to understand what rule we are following. That apart, let us come to facts. The facts are that he made two statements. One is that Mr. K. H. Patil is interested in a Cotton Sales Society or Cotton

(SRI H. SIDDAVEERAPPA)

Society which has taken manure to the tune of Rs. 7 to 8 lakhs and secondly, if I have heard him correctly, is that he misappropriated that sum.....

Sri I. SOMASEKHARAPPA.—Or misapplied.

Sri H. SIDDAVEERAPPA.—All right. That means the hon. member himself is not sure about the facts. This is what he has stated and it is there on record. This is a very serious matter. He is a responsible and an honourable member of this House and against him some allegations of a very grave character have been made.

This is a matter of misappropriation or misapplication as he puts pending adjudication by way of Writ Petition in the High Court. That is what he said. The Hon. Member has condemned Sri K. H. Patil by saying that he has misappropriated or misused the funds. What he said is not borne out by any evidence. When it is not borne out by any evidence either oral or documentary, the Hon. Member will have to meet the consequences of it. I am pleading on both the sides. Sri K. H. Patil denies the charges levelled against him and he says that they are not true and he further says that by involving him in this matter, the hon. member has committed a breach of privilege and it may be referred to the Privilege Committee. Therefore you may straight away refer this matter to the Privilege Committee and let the Committee consider this matter. I am also requesting Sri K. H. Patil not to proceed with the present motion on the agenda. I am also one of those speakers on this motion. Sriyuts Channabasappa, Gopala Gowda, K. H. Patil and myself have given this motion. Therefore I request you to withhold this motion which is standing in our name and take up this privilege motion immediately and refer the same to the Privilege Committee. Let the Committee give its finding.

Mr. DEPUTY SPEAKER.—At this stage, the Speaker cannot take any decision. The Hon. Member may give a notice which will be considered.

Sri K. H. PATIL.—Sir, any member may raise a privilege motion at any time. It is the duty of the Speaker to refer the matter to the Privilege Committee.

Mr. DEPUTY SPEAKER.—This is altogether a different case. No incident took place in the House. The Hon. Member made a statement on certain matters.

Sri K. H. PATIL.—The statement made by the Hon. Member is an obstruction to discharge my duty as a member of this House. When my rights and privileges are questioned, should I not raise this point? What right have I got then?

Sri H. SIDDAVEERAPPA.—The Hon. Member Sri K. H. Patil is not a member of care of footpath. He is an Hon. Member of this House against whom certain allegations are made. It is a serious charge to say that he has misappropriated some money.

Sri K. H. PATIL.—I want to know the decision from the Chair.

Mr. DEPUTY SPEAKER.—I have already stated that if a notice is given, it will be considered.

Sri K. H. RANGANATH.—Please see rule No. 288 (ii). It says that a member while speaking shall not make a personal charge against a member. But this Hon. Member has made a personal charge.

Mr. DEPUTY SPEAKER.—Does it amount to a breach of privilege?

Sri K. H. RANGANATH.—Yes. He has made a serious allegation. He said that Sri K. H. Patil has misappropriated or misspent the money of the society to the tune of nearly one lakh. It has gone into the records. But Sri K. H. Patil has denied the fact. Therefore, it is for the Hon. Sri Somashekarappa to prove whether it is a fact, otherwise he has to be hauled up.

Mr. DEPUTY SPEAKER.—That is why I said a notice has to be sent.

Sri H. SIDDAVEERAPPA.—As a Lawyer you know even the oral notice is as good as written notice.

Mr. DEPUTY SPEAKER.—Can the hon. Member tell me under which rule I can do this?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಅವರು ನೋಟಿಸು ಕಳುಹಿಸಬೇಕಾಗಿಲ್ಲ. ಹಿಂದೆ ಇದೇ ಸಭೆಯಲ್ಲಿ ಮಾನ್ಯ ಪಾರ್ಲಿಮೆಂಟರಿ ಶಾಖೆಯ ಮಂತ್ರಿಗಳು ಇಲ್ಲಿಯೇ ಶ್ರೀಮಾನ್ ಗೋಪಾಲಗೌಡರ ಮೇಲೆ ಆಪಾದನೆಯನ್ನು ಹೊರಿಸಿ ಪ್ರಿವಿಲೇಜ್ ಮೋಷನ್ ಬಂದುದು ನಮ್ಮ ಕಣ್ಣುಎದುರಿಗೇ ಇದೆ. ಈಗ ತಾವು ಹೇಳುವ ಹಾಗೆ ಇನ್‌ಸ್ಟೆನ್‌ಸಸ್ ಇಲ್ಲ ಎಂದರೆ ಫೋನು ಕಿತ್ತುಹಾಕಿ ಹೊಡೆದದ್ದು ಮಾತ್ರ ಇನ್‌ಸ್ಟೆನ್ಸ್ ಎಂದು ತಾವು ಹೇಳುತ್ತೀರಾ? ಒಬ್ಬರು ಮಾನ್ಯ ಸದಸ್ಯರು ಇನ್ನೊಬ್ಬರು ಮಾನ್ಯ ಸದಸ್ಯರ ಮೇಲೆ ಆಪಾದನೆ ಮಾಡಿ ಹಣವನ್ನು ದುರುಪಯೋಗ ಮಾಡಿದ್ದಾರೆ ಎಂದು ಅವರು ಅನತ್ಯವನ್ನು ಹೇಳಿದ್ದಾರೆ. ಇದು ಇನ್‌ಸ್ಟೆನ್ಸ್ ಅಲ್ಲವೇ?

Sri K. H. RANGANATH.—Please see rule 289. It says like this :

> "No allegations of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply;"

ಇದರ ಪ್ರಕಾರ ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು ಎಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು.—ಇದರ ಸತ್ಯಾಸತ್ಯತೆಯನ್ನು ಜಡ್ಜ್ ಮಾಡುವುದಕ್ಕೆ ಅವರು ನೋಟೀಸ್ ಬರೆದು ಕಳುಹಿಸಲಿ. ಆಮೇಲೆ ನಾನು ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಲೇ ತಾವು ಈ ಪ್ರಿವಿಲೇಜ್ ಮೋಷನ್ ತೆಗೆದುಕೊಂಡು ಕಮಿಟಿಯವರಿಗೆ ಕಳುಹಿಸಬೇಕು.

Mr. DEPUTY SPEAKER.- It will be considered. Let the Hon. Member give notice.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸದಸ್ಯರು ನತ್ಯಕ್ಕೆ ದೂರವಾದ ವಿಷಯವನ್ನು ಈ ಸಭೆಯ ಮುಂದೆ ಹೇಳಿದ್ದಾರೆ. ಅದು ಇರುವಾಗ ಮತ್ತೆ ನೋಟೀಸ್ ಕೊಡಿ ಇನ್‌ಸ್ಟೆನ್‌ನಸ್ ಇಲ್ಲ ಎಂದರೆ ಹೇಗಾಗುತ್ತದೆ. ಇಂಥಾದ್ದೇ ಈ ಸಭೆಯಲ್ಲಿ ನಡೆದಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಈ ಪ್ರಿವಿಲೇಜ್ ಮೋಷನ್ ಎತ್ತುವುದಕ್ಕೆ ಇದರ ಅರ್ಜೆನ್ಸಿ ಏನು ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇದನ್ನು ಗಮನಕ್ಕೆ ತೆಗೆದುಕೊಂಡು ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು. ಮಾನ್ಯ ಸದಸ್ಯರನ್ನು ತಾವು ಕೇಳಿ, ಅವರು ಹೇಳಿದ್ದನ್ನು ವಾಪಸ್ಸು ತೆಗೆದು ಕೊಳ್ಳುತ್ತೇವೆಂದು ಹೇಳಿದರೆ ನಮ್ಮದು ಏನೂ ಆಭ್ಯಂತರವಿಲ್ಲ. ಈಗ ಇದನ್ನು ವಿಚಾರಣೆ ಮಾಡಿ. ನೀವು ಇದಕ್ಕೆ ಒಪ್ಪಲೇ ಬೇಕು ; ಮತ್ತು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು. ಇಲ್ಲದಿದ್ದರೆ ವಿರೋಧ ಪಕ್ಷದ ಯಾವ ಸದಸ್ಯರನ್ನಾದರೂ ಒಬ್ಬೊಬ್ಬರನ್ನಾಗಿ ಇದೇ ರೀತಿ ಮಾಡುತ್ತಾ ಹೋಗ ಬಹುದು ; ಮತ್ತು ಕಂಡೆವು ಮಾಡಬಹುದು. ಇದರ ಬಗ್ಗೆ ನೀವು ಒಂದು ನಿಷ್ಪಕ್ಷಪಾತವಾದ ತೀರ್ಮಾನವನ್ನು ಇದರಲ್ಲಿ ಸಮಾಧಾನಪಟ್ಟುಕೊಂಡು ತೆಗೆದುಕೊಳ್ಳಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಶ್ರೀಮಾನ್ ರಂಗನಾಥರವರು ಕೇಳಿದಾಗ ತಾವು ಯಾವ ಆಧಾರದ ಮೇರೆ ಪ್ರಿವಿಲೇಜ್ ಮೋಷನ್ ಆಗುತ್ತದೆಂದು ಕೇಳಿದ್ದೀರಿ. ತಾವು ರೂಲ್ 182 ನ್ನು ನೋಡಿದರೆ ಸ್ಪಷ್ಟವಾಗಿ ತಿಳಿಯುತ್ತದೆ. ಅದರಲ್ಲಿ ಈ ರೀತಿ ಹೇಳುತ್ತದೆ :

> "Notwithstanding anything contained in these rules, the Speaker may refer any question of privilege to the Committee of Privileges for examination, investigation or report."

ಈಗ ನಮ್ಮ ಮುಂದಿರತಕ್ಕ ವಿಷಯ ಇಷ್ಟೆ. ನಾನು ವಿನ್ಯ ಸೋಮಶೇಖರಪ್ಪನವರು ಹೇಳಿದಾಗ ಬೇರೆ ಕಡೆ ಹೋಗಿದ್ದೆ. ಈಗ ರಂಗನಾಥರವರು ಹೇಳಿದಾಗಿ ಅರ್ಥವಾಯಿತು. ಅವರು ಮಿಸ್ ಅಪ್ರೋಪ್ರಿಯೇಷನ್ ಅಥವಾ ಮಿಸ್ ಅಪ್ಲಿಕೇಷನ್ ಎಂದು ಹೇಳಿದ್ದಾರೆ. ಮಿಸ್ ಅಪ್ರೋಪ್ರಿಯೇಷನ್ ಅಂದರೆ ಕ್ರಿಮಿನಲ್ ಚಾರ್ಜಸ್ ಆಗುತ್ತದೆ, ಮಿಸ್ ಅಪ್ಲಿಕೇಶನ್ ಕ್ರಿಮಿನಲ್ ಚಾರ್ಜಸ್ ಆಗುವುದಿಲ್ಲ. ಮಿಸ್ ಅಪ್ರೋಪ್ರಿಯೇಷನ್ ಅಥವಾ ಮಿಸ್ ಅಪ್ಲಿಕೇಷನ್ ಕೆ. ಎಚ್. ಪಾಟೀಲರು ಮಾಡಿದರು ಎಂದು ಅವರು ಹೇಳಿದ್ದಾರೆ. ಮಾನ್ಯ ಕೆ. ಎಚ್. ಪಾಟೀಲರು ಇವೆಲ್ಲಾ ಸುಳ್ಳು ಅಪಾದನೆಗಳು ಎಂದೂ ಹೇಳಿದರು. ಒಬ್ಬ ಮಾನ್ಯ ಸದಸ್ಯರು ಇಲ್ಲಿ ಕುಳಿತಿರುವಾಗ ಅವರ ಮೇಲೆ ಚಾರ್ಜಸ್ ಮಾಡಿದಾಗ, ಅದನ್ನು ಮಾನ್ಯ ಕೆ. ಎಚ್. ಪಾಟೀಲರು ಪ್ರತಿಭಟಿಸಿದ್ದಾರೆ. ಆದ್ದರಿಂದ ತಮಗೆ ರೂಲ್ 182ರ ಪ್ರಕಾರ ಇದನ್ನು ಪ್ರಿವಿಲೇಜ್ ವಿಚಾರ ಎಂದು ತೀರ್ಮಾನಿಸಲು ಅಧಿಕಾರ ಇದೆ.

Sri H. SIDDAVEERAPPA.—Sir, in deference to the guidance you have given, we will give it in writing and let it be taken up afterwards.

Mr. DEPUTY SPEAKER.—All right.

†ಶ್ರೀ ಕೆ. ಎಚ್. ಪಾಟೀಲ್ (ಗದಗ).—ಸ್ವಾಮಿ, ಅಧ್ಯಕ್ಷರೇ, ಈಗ ನಮ್ಮ ಎದುರಿಗೆ ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ವಿಚಾರದಲ್ಲಿ ಶ್ರೀಮಾನ್ ಸಿ. ಕೆ. ರಾಮಯ್ಯ ಶೆಟ್ಟರು ಪ್ರಶ್ನೆ 63ರನ್ನು ಕೇಳಿದರ ಬಗ್ಗೆ ಸಾಕಷ್ಟು ಉಪಪ್ರಶ್ನೆಗಳು ಎದ್ದು, ಸಮಯದ ಅಭಾವ ಇದ್ದುದರಿಂದ ಉಪಪ್ರಶ್ನೆಗಳಿಗೆ ಸಮಾಧಾನಕರವಾದಂತಹ ಉತ್ತರ ಅವರಿಂದ ಸಿಗದ ಕಾರಣ ಈ ಅರ್ಧ ಗಂಟೆಯ ಚರ್ಚೆಯು ಬಂದಿದೆ. ಆ ಕಾರಣಕ್ಕೆ ಈ ಚರ್ಚೆಯನ್ನು ಮಾಡಲೇಬೇಕಾಯಿತು. ಅದರ ಹಿನ್ನೆಲೆಯಲ್ಲಿ, ಇದರಲ್ಲಿ ಯಾವುದೇ ಪೂರ್ವ ಉದ್ದೇಶಿತ ದ್ವೇಷಭಾವನೆ ಇರಲಿ, ಇವತ್ತು ಸಹಕಾರಿ ಕ್ಷೇತ್ರದಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯು ಬಹಳ ಮಹತ್ತರವಾದ ಪಾತ್ರವನ್ನು ವಹಿಸ ಬೇಕಾಗಿದೆ. ಈ ಸಹಕಾರೀ ಚಳವಳಿಯಲ್ಲಿ ನಹಕರಿಸಿ ಈ ಘನವಾದ ಉದ್ದೇಶದಲ್ಲಿ ಪಾಲ್ಗೊಳ್ಳಲು ಸದಸ್ಯರಿಗೂ ಮನಸ್ಸಿದೆ ಎಂಬುವುದನ್ನು ನಮ್ಮ ಸ್ನೇಹಿತರಿಗೆ ಹೇಳುತ್ತಿದ್ದೇನೆ. ಕೆಲವು ಸ್ನೇಹಿತರು ಈ ಪ್ರಶ್ನೆಯ ಜೊತೆಯಲ್ಲಿ ಡೈರೆಕ್ಟರಾಗಿದ್ದಂತವರು ಈ ಸಂಸ್ಥೆಯಲ್ಲಿ ಅಪವ್ಯಯ ಮಾಡಿದ್ದಾರೆ, ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆ ಎಂದೆಲ್ಲಾ ಬಾಯಿಗೆ ಬಂದ ಹಾಗೆ, ಸರ್ಕಾರದ ಪ್ರಯೋ

ದನೆಯಿಂದ ಮಾತನಾಡುತ್ತಿದ್ದಾರೆ. ಆದರೆ ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅವರು ಗದಗ್‌ನ ಸಂಸ್ಥೆಯಲ್ಲಿ ಕೆ. ಎಚ್. ಪಾಟೀಲರು ಅಧ್ಯಕ್ಷರಾಗಿದ್ದಾರೆಂದು ಹೇಳಿದರು. ನಾನು ಅದರ ಅಧ್ಯಕ್ಷನಾಗಿಲ್ಲ.

ಶ್ರೀ ಬಾಪುಗೌಡ.—ಮಾನ್ಯ ಕೆ. ಎಚ್. ಪಾಟೀಲರು ಕಾಟನ್ ಸೊಸೈಟಿಯ ಅಧ್ಯಕ್ಷರು ಯಾವತ್ತೂ ಆಗಿರಲಿಲ್ಲವೇ ? ಇದುವರಿಗೆ ಎಂದೂ ಆಗಿರಲಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಹುಟ್ಟಿದಾರಭ್ಯ ಇಲ್ಲ ನಿಂತ ಅವಧಿಯವರೆಗೂ ಆಗಿರಲಿಲ್ಲ.

Sri BAPU GOWDA. - Let the Hon. Member say whether he is directly or indirectly connected with it or not.

ಶ್ರೀ ಕೆ. ಎಚ್. ಪಾಟೀಲ್.—ನಾನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಸಂಸ್ಥೆ ಯಲ್ಲಿ ಇವರು ಈ ಮೈನೂರು ಸರ್ಕಾರದವರು ಮಾಡಬಾರದ್ದನ್ನು ಮಾಡಿ, ನನ್ನ ಮುಖಕ್ಕೆ ಮಸಿ ಬಳಿಯುವ ಕಾರ್ಯವನ್ನು ಮಾಡಿ, ನನ್ನ ಸ್ಥಾನಕ್ಕೆ ಕಳಂಕ ಬರುವ ಹಾಗೆ ವರ್ತನೆ ಮಾಡುತ್ತಿದ್ದಾರೆ ಹಣ ಕೊಡುವ ಬಗ್ಗೆ, ನೀವು ಲೆಕ್ಕಗಳನ್ನು ಸರಿಯಾಗಿ ಬರೆದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸೋವೇ. ಶೇಖರಪ್ಪನವರು ನಾಲ್ಕು ವರ್ಷದ, 6 ವರ್ಷದ ಲೆಕ್ಕದ ಬಗ್ಗೆ ಈ ರೀತಿ ಹೇಳುತ್ತಿರುವುದು ಬಹಳ ವಿಷಾದನೀಯ ಮತ್ತು ನಾಚಿಕೆಗೇಡಿನ ವಿಷಯ. ಈ ವಿಚಾರ ಈಗಾಗಲೇ ಕೋರ್ಟಿನ ಮುಂದೆ ಇದೆ, ಮತ್ತು ಅದಕ್ಕೆ ಈಗಾಗಲೇ ಸ್ಟೇ ಕೊಟ್ಟಿದ್ದಾರೆ. ಇವರು ಅರ್ಬಿಟ್ರೇಟರ್ ಎದುರು ಹೋದಾಗ, ಅದು ತಪ್ಪು ಎಂದು ಹೇಳಿದ್ದಾರೆ. ಅದಕ್ಕೆ ಸ್ಟೇ ಆಗಿರುವುದರಿಂದ ಆ ವಿಚಾರವನ್ನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ನಾನು ಹೇಳುತ್ತಿರುವ ವಿಚಾರ ಇಷ್ಟೆ. ಇವತ್ತು ಒಂದು ಕೋಟಿ 9 ಲಕ್ಷದ 72 ಸಾವಿರದ 700 ರೂಪಾಯಿಯಷ್ಟು ಹಣವನ್ನು ನಮ್ಮ ಸರ್ಕಾರದವರು ಅಲ್ಲ ತೊಡಗಿಸಿದಾರೆ. ಇದನ್ನು ಯಾವರೀತಿ ಪ್ರೊಪೋರ್ಷನೇಟ್ ಆಗಿ ಕೊಟ್ಟಿದ್ದೀರಿ ? ನೀವು ಉಳಿದ ಸಹಕಾರ ಸಂಘಗಳಿಗೆ ಯಾವ ರೀತಿ, ಹೇಗೆ ಕೊಟ್ಟಿದ್ದೀರಿ ? ಇಲ್ಲ ಅವರು ನಿಮ್ಮ ಕೈಬಿಡುಕರು ಆಗಿರುವುದರಿಂದ ಇದನ್ನು ಅವ್ಯವಹಾರಿಕವಾಗಿ ಕೊಟ್ಟಿದ್ದೀರೆಂಬುದು ಮೂಲ ಪ್ರಶ್ನೆಯಾಗಿದೆ. ಮಾನ್ಯ ಸೋವು ಶೇಖರಪ್ಪನವರು ಹೇಳುವುದು ಮತ್ತು ಮಾನ್ಯ ಬಿ. ಎಲ್. ಗೌಡರು ಹೇಳುವುದು ನೋಡಿದರೆ, ಅದು ಸರಿಯಲ್ಲದ ಮಾತು. ಇವರು ಒಂದಲ್ಲ ಒಂದು ರೀತಿಯಲ್ಲಿ ಅವರ ನಾಮಿನಿಗಳು ಆಗಿರುವುದರಿಂದ ನಿಜವಾಗಿಯೂ ಡಿಸ್‌ಕ್ವಾಲಿಫೈ ಆಗುತ್ತಾರೆ. ನಿಜವಾಗಿಯೂ ಒಬ್ಬ ನದನ್ಯರು ಆ ರೀತಿ ಮಾತನಾಡುವುದು ಸರಿಯಲ್ಲ. ಇವತ್ತಿನ ದಿವಸ ನೀವು ಒಂದು ಕೋಟಿಗಿಂತ ಹೆಚ್ಚಿನ ಹಣವನ್ನು ಅಲ್ಲಿ ಸೇರಿಸುವುದಕ್ಕೆ ಕಾರಣವೇನು ? ಅದನ್ನು ಯಾವ ರೂಪದಲ್ಲಿ ಕೊಟ್ಟಿದ್ದೀರಿ ? ಷೇರ್ ರೂಪದಲ್ಲಿ ಕೊಟ್ಟಿದ್ದೀರಾ ? ಅದರಿಂದ ನಿಮಗೆ ಬಂದಂತಹ ಬಡ್ಡಿ ಏನು ? ಕೇಂದ್ರಸರ್ಕಾರದ ಹಣವನ್ನು ಪಡೆದುಕೊಂಡು ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಹಣವನ್ನು ಪಡೆದುಕೊಂಡು ಅವನ್ನು ಯಾವ ರೀತಿ ವಿನಿಯೋಗ ಮಾಡಿದ್ದೀರಿ ? ವಿನಿಯೋಗ ಮಾಡಿದ್ದಕ್ಕೆ ಯಾವ ರೀತಿ ಇನ್‌ಕಂ ಪಡೆದಿದ್ದೀರಿ? ಇವತ್ತು ರೈತರಿಗೆ ಗೊಬ್ಬರವನ್ನು ಮಾರುತ್ತಿದ್ದೀರಿ; ಆದರೆ ಅದರಲ್ಲಿ ಹೇರಳವಾದ ಲಾಭವನ್ನು ಗಳಿಸುವಂತೆ ಚಾರ್ಜ್ ಹಾಕುತ್ತಿದ್ದೀರಿ. ಆದರೂ ಸಹ ನೀವು ಪಡೆದಿರುವ ಲಾಭ ಏನು ಎಂದು ಕೇಳಬೇಕಾಗುತ್ತದೆ. ಇವೊತ್ತಿನ ದಿವಸ ನೀವು ಮಾರ್ಕೆಟ್ ಸೊಸೈಟಿಗೆ ಹೇರಳವಾದ ಹಣವನ್ನು ಕೊಟ್ಟಿದ್ದೀರಿ. 7-8 ವರ್ಷದ ವರೆಗೂ ಬಡ್ಡಿಯನ್ನು ತೆಗೆದುಕೊಳ್ಳದೆ ಇಟ್ಟುಕೊಂಡಿದ್ದೀರಿ. ಅವರಿಂದ ಬಡ್ಡಿಯನ್ನು ಯಾಕೆ ವಸೂಲು ಮಾಡಿಲ್ಲ; ಮತ್ತು ಕೊಟ್ಟ ಹಣವನ್ನೂ ಸಹ ಯಾಕೆ ವಸೂಲು ಮಾಡುವುದಿಲ್ಲ ? ನೀವು ಈ ರೀತಿ ಯಾವ ಸೊಸೈಟಿಗೆ ಕೊಟ್ಟಿದ್ದೀರಿ ಮತ್ತು ಆ ತರಹ ಯಾವ ಸೊಸೈಟಿಯಿಂದ ಬಡ್ಡಿ ಕೂಡ ತೆಗೆದುಕೊಳ್ಳುವುದಿಲ್ಲ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ.

7-30 P.M.

ಇವೊತ್ತಿನ ದಿವಸ ಒಂದು ಸಂಕಟ ಪರಿಸ್ಥಿತಿ ಏನೆಂದರೆ ಮಾರ್ಕೆಟಿಂಗ್ ಸೊಸೈಟಿ ಬಡ್ಡಿ ವಸೂಲು ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಹಿಂದಿನಿಂದ ನೇರವಾಗಿ ಆ ಹಣ ಸರ್ಕಾರಕ್ಕೆ ಬರಬೇಕು. ಹೋದ ವರ್ಷ ರಿಜರ್ವ್ ಬ್ಯಾಂಕಿನವರ ಒತ್ತಾಯಕ್ಕೆ ಒಳಗಾಗಿ ಬಡ್ಡಿಯನ್ನು ವಸೂಲು ಮಾಡುವುದಕ್ಕೆ ಹತ್ತಿದ್ದಾರೆ. ಈಗ ಹಿಂದಿನ ಬಡ್ಡಿಯನ್ನು ವಸೂಲು ಮಾಡಿ ಎಂದರೆ ಅದನ್ನು ವಸೂಲು ಮಾಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ ಎಂದು ನಾನು ಕೇಳುತ್ತೇನೆ. ರಾಜ್ಯದ ಬೊಕ್ಕ

(ಶ್ರೀ ಕೆ. ಎಚ್. ಪಾಟೀಲ್)

ಸಕ್ಕೆ ಹಾನಿಯಾಗಬಾರದು. ಈಗ ನೀವೇ ಕೊಟ್ಟಿರುವ ಇನ್‌ಫರ್‌ಮೇಷನ್ ಪ್ರಕಾರ 1967-68ರ ವರೆಗೆ ಪ್ರಾಫಿಟ್ ಅಂಡ್ ಲಾಸ್ ಕೊಟ್ಟಿದ್ದೀರಿ. 1968-69ನೇ ಸಾಲಿನ ಆಡಿಟ್ ಆಗಿಲ್ಲ ಎನ್ನುವ ಮಾತು ಸ್ಪಷ್ಟವಾಗುತ್ತದೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ರಾಜ್ಯದಲ್ಲಿ ಎಲ್ಲಾ ಸೊಸೈಟಿಗಳಿಗೂ ಮಾದರಿಯಾಗಿರಬೇಕು. ಹಿರಿಯಕ್ಕನ ಚಾಳಿ ಮನೆಮುಕ್ಕಳಿಗೆಲ್ಲಾ ಎನ್ನುವ ಹಾಗೆ ಈ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರೇ ಈ ರೀತಿ ವ್ಯವಹಾರ ಮಾಡುವುದಾದರೆ ಇನ್ನು ಉಳಿದ ಎಲ್ಲಾ ಸಹಕಾರ ಸಂಘಗಳಿಗೂ ಇದೇ ಹವ್ಯಾಸ ಬರುತ್ತದೆ. ಈ ರೀತಿ ರಾಜ್ಯಭಾರ ಮಾಡುವುದು ಸರಿಯಿಲ್ಲ. ರಾಜ್ಯದಲ್ಲಿ ಸಹಕಾರ ಇರಾಖೆಯಲ್ಲಿ ಮಂತ್ರಿಗಳು ಮತ್ತು ಉಪಮಂತ್ರಿಗಳು ಇದ್ದು ಕೊಂಡು ಒಂದು ವರ್ಷ ಪೂರ್ತಿಯಾದರೂ ಆ ಸೊಸೈಟಿಯ ಲೆಕ್ಕವನ್ನು ಇನ್ನೂ ಮುಗಿಸಿಲ್ಲ, ಆಡಿಟ್ ಮಾಡಿಲ್ಲ ಎಂದರೆ ಇದರ ಹಿನ್ನೆಲೆಯಲ್ಲಿ ಯಾವ ರೀತಿ ಮೋಸ ನಡೆಯುತ್ತದೆ ಎಂಬುದು ನಮಗೆ ಎದ್ದು ಕಾಣುತ್ತಿದೆ. ಆದ್ದರಿಂದ ನಾನು ತಮ್ಮನ್ನು ಬಹಳ ನಮ್ರತೆಯಿಂದ ಕೇಳುತ್ತೇನೆ, ಆ ಸಂಘಕ್ಕೆ ರೇಟೆನ್ಟ್ ಆಗಿ ಆದಂತಹ ರಾಭ ಏನು ? ಮತ್ತು ಅವರು ಸರ್ಕಾರಕ್ಕೆ ಕೊಡಬೇಕಾದ ಹಣ ಎಷ್ಟು, ಬಡ್ಡಿ ಎಷ್ಟು ? ತಾವು ಎಷ್ಟು ಹಣವನ್ನು ಅವರಿಂದ ವಸೂಲು ಮಾಡುತ್ತೀರಿ, ಎಷ್ಟು ಹಣವನ್ನು ನೋಡಿ ಬಿಡುತ್ತೀರಿ ? ಈ ಬಗ್ಗೆ ಆ ಸಂಘದ ಡೈರೆಕ್ಟರ್ ಮತ್ತು ಪ್ರೆಸಿಡೆಂಟರೊಡನೆ ಆಲೋಚನೆ ಮಾಡಿದ್ದೀರಾ ? ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನಲ್ಲೇ ಗೊಬ್ಬರವನ್ನು ಹಂಚುವ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರೆ ಏನು ಪ್ರಯೋಜನವಾಗುತ್ತಿತ್ತು ? ಸಹಕಾರ ಇರಾಖೆಯವರು ಗೊಬ್ಬರದ ಹಂಚಿಕೆಯನ್ನು ಉತ್ತಮವಾದ ರೀತಿಯಲ್ಲಿ ನಡೆಸುವುದಾದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ರೀತಿ ದುರುಪಯೋಗ ದುರ್ವ್ಯವಹಾರಗಳು ನಡೆದರೆ ನಾನು ಅದನ್ನು ಸಹಿಸುವುದಕ್ಕಾಗುವುದಿಲ್ಲ. ಈ ರೀತಿ ಸಹಕಾರ ರಂಗದಲ್ಲಿ ಈ ಗೊಬ್ಬರದ ವ್ಯವಹಾರವನ್ನು ನಡೆಸುವುದಾದರೆ ಇದರಿಂದ ಜನಗಳಿಗೆ ಕಲ್ಯಾಣವಾಗುವುದಿಲ್ಲ. ನೀವು ಸಹಕಾರ ಸಂಘಗಳಿಗೆ ಕೊಟ್ಟಂಥಾ ಗೊಬ್ಬರ ಉಳಿಯುತ್ತದೆ. ವರ್ಷೇ ವರ್ಷೇ ಇದರಿಂದ ಹಾನಿಯಾಗುತ್ತದೆ. ರೈತನಿಗೂ ಅನುಕೂಲ ವಾಗುವುದಿಲ್ಲ. ಈ ದೃಷ್ಟಿಯಿಂದ ತಾವು ವಿವೇಚನೆ ಮಾಡಬೇಕು ಎಂದು ನಾನು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ.

ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ ಈ ಸ್ಟೇಟ್ ಮಾರ್ಕೆಟಿಂಗ್ ಸಂಘದವರು ಗೊಬ್ಬರವನ್ನು ಖರೀದಿ ಮಾಡುವಾಗ ಅದು ಒಂದು ಪಿಧವಾದ ಪಾನನೆ ಬರುತ್ತಿತ್ತು. ಆದರೆ ಇವರು ಕೇಂದ್ರ ಸರ್ಕಾರದ ಮಂತ್ರಿಗಳ ಸಂಬಂಧೀಕರ ಒಬ್ಬರ ಪ್ರಭಾವಕ್ಕೊಳಗಾಗಿ ಅನಾವಶ್ಯಕವಾಗಿ ಗೊಬ್ಬರವನ್ನು ಖರೀದಿ ಮಾಡಿದ್ದಾರೆ. ಇದು ನಿಜವೇ ಆಥವಾ ಸುಳ್ಳೇ ? ಇದು ಸುಳ್ಳು ಎಂದರೆ ಅದನ್ನು ನಾನು ನಿಜವಾಗಿಯೂ ಸ್ವಾಗತಿಸುತ್ತೇನೆ. ಆದರೆ ನನಗೆ ಬಂದ ವರ್ತಮಾನದ ಪ್ರಕಾರ ಇವರು ಒಬ್ಬರ ಪ್ರಭಾವಕ್ಕೊಳಗಾಗಿ ಆ ಗೊಬ್ಬರವನ್ನು ಖರೀದಿ ಮಾಡಿದ್ದಾರೆ. ಇದರಲ್ಲಿ ರಾಜಕೀಯ ಭ್ರಷ್ಟಾಚಾರ ನಡೆದಿದೆ. ಇದರಲ್ಲಿ ಈ ವ್ಯವಹಾರದಲ್ಲಿ ಸಂಶಯ ಬರುವುದಕ್ಕೆ ಕಾರಣವಾಗಿದೆ. ಈ ದೃಷ್ಟಿಯಿಂದ ನಾನು ಕೇಳುತ್ತೇನೆ. ಈ ಗೊಬ್ಬರವನ್ನು ಖರೀದಿ ಮಾಡುವುದಕ್ಕೆ ಟೆಂಡರ್ ಕರೆದಿದ್ದೀರಾ ? ಇಲ್ಲ. ನೀವು ಮದ್ರಾಸ್‌ನಿಂದ ನೈಟ್ರೋಫಾಸ್ ಮತ್ತು ಸೂಪರ್‌ಫಾಸ್ಫೇಟ್‌ಗಳನ್ನು ಖರೀದಿ ಮಾಡಿದ್ದೀರಾ. ಇದರಲ್ಲಿ ಏನೋ ಕೈವಾಡ ನಡೆದಿದೆ. ಎಲ್ಲೆಲ್ಲಿ ಇವರ ಹಿತಚಿಂತಕರು ಇದ್ದಾರೆ, ಎಲ್ಲೆಲ್ಲಿ ದುರುಪಯೋಗ, ದುರ್ವ್ಯವಹಾರ ನಡೆದಿದೆ ಅದನ್ನು ವಿಚಾರ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಿ. ಇವೊತ್ತು ಎಲ್ಲೆಲ್ಲಿ ಗೊಬ್ಬರದ ಖರೀದಿ ಆಗಿದೆ ಅದೆಲ್ಲವೂ ಖಾನಗಿಯವರ ಮುಖಾಂತರ, ಕಂಪೆನಿಗಳ ಮುಖಾಂತರ ಆಗಿದೆ. ಇವರು ಟೆಂಡರ್ ಕರೆದಿದ್ದಾರೆಯೇ ? ಪತ್ರಿಕೆಗಳಲ್ಲಿ ಪ್ರಸಿದ್ಧ ಮಾಡಿದ್ದಾರೆಯೇ ? ಸಹಕಾರ ಸಂಘಗಳವರು ಪ್ರಸಿದ್ಧ ಮಾಡಿದ್ದಾರೆಯೇ ! ಇವೊತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಮತ್ತು ರಿಜರ್ವ್ ಬ್ಯಾಂಕಿನವರು ಈ ಬಗ್ಗೆ ಸರ್ಕಾರಕ್ಕೆ ಏನು ಹಣ ಸಹಾಯವನ್ನು ಮಾಡುತ್ತಿದ್ದಾರೆ ಅದನ್ನು ತಾವು ಸರಿಯಾಗಿ ಉಪಯೋಗ ಮಾಡುತ್ತಿದ್ದೀರಾ ! ಈ ಬಗ್ಗೆ ಸಹಕಾರ ಸಂಘಗಳಿಗೆ ಕೊಡತಕ್ಕಂಥ ಹಣ ದುರುಪಯೋಗವಾಗುತ್ತಿದೆ, ದುರ್ವಿನಿಯೋಗವಾಗುತ್ತಿದೆ ಎಂದು ನಾನು ಹೇಳುತ್ತೇನೆ. ಈಗ ಇಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯ ಒಂದು ಉದಾಹರಣೆ ಇದೆ. ಇಂಥಾದ್ದು ಅನೇಕ ಇವೆ. ನಾನು ಮಾತನಾಡುವಾಗ ಏನಾದರೂ ವಿರೋಧವಾಗಿ ಮಾತನಾಡಿದರೆ ಅದು ಸಹಕಾರಿ ಅಭಿವೃದ್ಧಿಯ ದೃಷ್ಟಿಯಿಂದ ಹೇಳುವುದು. ನಾನು ಮಾನ್ಯ ಬಿ.ಎಲ್.ಗೌಡರಲ್ಲ ಸವಿನಯಪೂರ್ವಕವಾಗಿ ತಿಳಿಸುತ್ತೇನೆ. ಅಗ್ರಿಕಲ್‌ಚರಲ್ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಒಳ್ಳೆಯ ಉದಾತ್ತವಾದ ಭಾವನೆಯುಳ್ಳ ಜನಗಳನ್ನು ನಿಯಮಿಸಿ ರೈತರಿಗೆ ಬೇಕಾದಂತಹ ಬೀಜ ಗೊಬ್ಬರ ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ವಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಎಲ್ಲಾ ರೀತಿಯಿಂದಲೂ ಆದಳಿತದಲ್ಲಿ ತಾರತಮ್ಯ ಮಾಡಕೂಡದು ಎಂದು ನಾನು ಹೇಳುತ್ತೇನೆ.

ಇದನ್ನೆಲ್ಲಾ ಕಂಟ್ರೋಲ್ ಮಾಡುವುದಕ್ಕೆ ನಾನು ಹೇಳಿದ ಮಾತುಗಳನ್ನೆಲ್ಲಾ ಮಾನ್ಯ ಉಪಮಂತ್ರಿಗಳಾದ ಶ್ರೀ ಬಿ. ಎಲ್. ಗೌಡರು ಗಮನದಲ್ಲಿಟ್ಟುಕೊಂಡು ನಿಜವಾಗಿಯೂ ರಾಜ್ಯದಲ್ಲಿ ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳು ಹೆಚ್ಚು ಪ್ರೋಪಕವಾಗುವಂತೆ ಬೆಳೆಸಬೇಕು. ಬಕ್ಕಲುತನಕ್ಕೆ ಬೇಕಾದಂತಹ ಬೀಜ, ಗೊಬ್ಬರ, ವ್ಯವಸಾಯದ ಉಪಕರಣ ಇವುಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಮಾರಾಟ ಮಾಡುವಂಥಾ ವ್ಯವಸ್ಥೆಯನ್ನು ಮಾಡಿ ಅವು ನಿಜವಾದ ಬೆಲೆಗೆ ರೈತರಿಗೆ ಸಿಕ್ಕುವಂತಾಗ ಬೇಕು. ಇವು ಕತ್ತಲಲ್ಲಿ ಹಣವನ್ನು ಇಟ್ಟುಕೊಂಡಿರತಕ್ಕ ಶ್ರೀಮಂತರ ಕೈಗೆ, ವ್ಯಾಪಾರಸ್ಥರ ಕೈಗೆ ಕೊಟ್ಟು ಅವರು ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣವನ್ನು ಗಳಿಸುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಮಾರಾಟ ಮಾಡುವಂಥಾ ಬೆಲೆ ನ್ಯಾಯಾದ ಬೆಲೆ ಆಗಬೇಕು. ಇಂಥಾದ್ದಕ್ಕೆಲ್ಲಾ ಮಾರ್ಕೆಟಿಂಗ್ ಸೊಸೈಟಿಯನ್ನು ಉಪಯೋಗ ಮಾಡಿ ಅದರ ಮೂಲಕ ಈ ನಿಲಕರಣೆಗಳನ್ನು ಮಾರಾಟ ಮಾಡಿದರೆ ಸಾರ್ಥಕವಾಗುತ್ತದೆ. ಕೇಂದ್ರ ಸರ್ಕಾರದಿಂದ ನಮ್ಮೆಲ್ಲರ ಹೆಸರಿನಲ್ಲಿ, ಮಾರ್ಕೆಟಿಂಗ್ ಸೊಸೈಟಿಗಳ ಹೆಸರಿನಲ್ಲಿ, ಸಹಕಾರ ಸಂಘದ ಹೆಸರಿನಲ್ಲಿ ನೀವು ಏನು ಹಣವನ್ನು ಪಡೆಯುತ್ತೀರೋ ಅದನ್ನು ದುರುಪಯೋಗ ಮಾಡದೆ ಅದನ್ನು ಸದುಪಯೋಗ ಮಾಡಬೇಕು. ಸ್ವಾರ್ಥಿಗಳ ಕೈಯಲ್ಲಿ ಇದನ್ನು ಕೊಟ್ಟು ಅವರು ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಉಪಾಧ್ಯಕ್ಷರೇ ಶ್ರೀಮಾನ್ ಸಿ.ಕೆ. ರಾಜಯ್ಯೆಟ್ಟರ ಪ್ರಶ್ನೆಗೆ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಚರ್ಚೆ ಕೂಡ ಆಗಿದೆ. ಸಹಕಾರ ಸಂಸ್ಥೆಗೆ ಸಂಬಂಧಪಟ್ಟ ರಿಜಿಸ್ಟ್ರಾರು ಇಲ್ಲಿ ಹಾಜರಿದ್ದಾರೆ. ಮತ್ತು ಸಹಕಾರ ಕ್ಷೇತ್ರದಲ್ಲಿ ಬಹಳ ಪಳಗಿದ ಮಂತ್ರಿಗಳು ಇದ್ದಾರೆ. ಈ ಪ್ರಶ್ನೆಯನ್ನು ಹಾಕುವುದಕ್ಕೆ ಕಾಲ ಇಲ್ಲ ಎಂದರು. ಕ್ರಿಯಾಶೀಲ ಪ್ರತಿದವರೂ ಕೂಡ ಸಹಕಾರ ಸಂಸ್ಥೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಶಿವಮೊಗ್ಗ ಜಿಲ್ಲೆಯ ಹೊಸ ನಗರದ ಸದಸ್ಯರು ಏನು ಮಾಡಿದ್ದಾರೆ ಆ ವಿಷಯದ ಬಗ್ಗೆ ನಾನು ಈಗ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಸಮಯ ಇಲ್ಲ. ಆದರೆ ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳುವುದು ಏನೆಂದರೆ ತಾವು ಓದಗಿಸಿರುವ ಉತ್ತರಗಳ ಜೊತೆಗೆ ಯಾರ ಪ್ರೇರಣೆಯಿಂದ ಸರ್ಕಾರ ಈ ವ್ಯವಹಾರವನ್ನು ಕೈಕೊಂಡಿತು. ರಾಸಾಯನಿಕ ಗೊಬ್ಬರದ ವಾರ್ಷಿಕ ಅವಶ್ಯಕತೆ ಎಷ್ಟು? ಈಗ ಒಂದು ವರ್ಷಕ್ಕೆ 6 ಲಕ್ಷ ರೂಪಾಯಿ ನಷ್ಟ ಮತ್ತು ಬಡ್ಡಿ 17 ಲಕ್ಷ 37 ಸಾವಿರ ರೂಪಾಯಿ. ಈ ರೀತಿ ಎಲ್ಲಾ ಕೊಟ್ಟದ್ದನ್ನು ಸಹಕಾರಿ ಸಂಸ್ಥೆಯಿಂದ ಕೊಡುತ್ತೀರೋ ಅಥವಾ ಸಹಕಾರಿ ಸಂಸ್ಥೆಯಲ್ಲಿರತಕ್ಕ ಹಣವೆಲ್ಲಾ ಡೈರೆಕ್ಟರ ಸ್ವಂತ ಅನುಭವಕ್ಕೆ—ಅವರು ಒಂದು ಸಲ ಆ ತರಹ ಉತ್ತರ ಕೊಟ್ಟಿದ್ದಾರೆ ಒಂದು ಕಡೆ—ಆಹಾರ ಪದಾರ್ಥವನ್ನು ಕೊಳ್ಳುವುದಕ್ಕೆ ಕೊಟ್ಟ 9–10 ಕೋಟಿ ರೂಪಾಯಿ ಅದು ನಮ್ಮ ಹಣ ಇದ್ದ ಹಾಗೆಯೇ ಏಕೆಂದರೆ ಅದನ್ನು ಬೇಕಾದಾಗ ನಾವು ಉಪಯೋಗಿಸುತ್ತೇವೆ, ಬೇಡವಾದಾಗ ಯಾವುದೋ ಒಂದು ಬ್ಯಾಂಕಿನಲ್ಲಿ ಇಟ್ಟಿರುತ್ತೇವೆ, ಆ ಪ್ರಕಾರ ಸರ್ಕಾರಿ ಲೆಕ್ಕದಲ್ಲಿ ಇದೆಲ್ಲಾ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ವ್ಯವಹಾರ ನಡೆದಿದೆ. ಒಟ್ಟು ಏನು ಮುಖ್ಯ ಮಂತ್ರಿಗಳು ಮೈಸೂರು ರಾಜ್ಯದ ಇತಿಹಾಸದಲ್ಲಿಯೇ ನಾವು ಇಷ್ಟು ಕೋಟಿ ರೂಪಾಯಿಗಳ ಸಾಲವನ್ನು ರೈತರಿಗೆ ಕೊಟ್ಟುಬಿಟ್ಟಿದ್ದೇವೆ ಎಂದು ಹೇಳಿ ತುಂಬಾ ಹೆಮ್ಮೆಯಿಂದ ಈ ಸಭೆಯ ಮುಂದೆ ಏನು ಹೇಳಿಕೊಂಡಿದ್ದಾರೋ ಈ ಸಾಲ ಕೊಟ್ಟ ಕ್ರಮ, ಯಾರಿಗೆ ಕೊಟ್ಟಿದ್ದಾರೆ? ಎಷ್ಟೆಷ್ಟು ಕೊಟ್ಟಿದ್ದಾರೆ? ಯಾವ್ಯಾವ ಡೈರೆಕ್ಟರುಗಳು, ರಿಜಿಸ್ಟ್ರಾರುಗಳು ಇದಕ್ಕೆ ಹೊಣೆ ಅಂತ ಅನ್ನುವುದು ವಿಚಾರಣೆಯ ಕಾಲದಲ್ಲಿ ವಿಚಾರಣೆ ಆಗಿಯೇ ಆಗುತ್ತದೆ. ಕೆಲವು ನಿರಪರಾಧಿಗಳಿಗೆ ಶಿಕ್ಷೆ ಆಗಲೂ ಬಹುದು. ಕೋತಿ ತಿಂದು ಮೇಕೆ ಬಾಯಿಗೆ ಒತ್ತಿರುತ್ತದೆ, ಏಕೆಂದರೆ ಕೋತಿ ಬುದ್ಧಿವಂತ ಪ್ರಾಣಿ. ಆದ್ದರಿಂದ ಈ ರಾಸಾಯನಿಕ ಗೊಬ್ಬರವನ್ನು ಪಡೆದುಕೊಂಡಿರುವ ಬಗ್ಗೆ, ಮಾರಾಟದ ದರ, ಪರ್ಸೆಂಟರು ಇಟ್ಟಿರುವ ಗೋಡೌನು, ಅದಕ್ಕೆ ಕೊಟ್ಟಿರುವ ಬಡ್ಡಿ ಮತ್ತು ಆಗಿರುವ ನಷ್ಟ ಮತ್ತು ತೋರಿಸಿರುವ ಲಾಭ, ಯಾವ ಮೂಲಕ ಲಾಭ ಬಂದಿದೆ, ಲಾಭದ ದೃಷ್ಟಿಯಿಂದ ಲಾಭ ಬಂದಿದೆಯೇ? ಈ ಲಾಭ ತೋರಿಸಿದ್ದೀರಲ್ಲಾ ಇದು ಓಪನ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿ ನೀವು ಪಡೆದುಕೊಂಡ ಹಣಕ್ಕಿಂತ ಹೆಚ್ಚು ಲಾಭ ಬಂದಿದೆಯೇ? ಸೊಸೈಟಿಗಳಲ್ಲಿ ಲೆಕ್ಕ ಹಾಕಿ ಈ ಸಭೆಗೆ ತೋರಿಸಲಕ್ಕೆ ಮಾಡಿರುವಂತಹ ಲಾಭವೇ? ಇದನ್ನೆಲ್ಲಾ ತಾವು ನಮಗೆ ದಯವಿಟ್ಟು ಹೇಳಬೇಕು. ಮತ್ತು ಒಂದು ಸಾವಿರ ಷೇರು ಬಂಡವಾಳವನ್ನು ತೊಡಗಿಸಿದ್ದೀರಲ್ಲಾ ಇದು ಯಾವ ರೀತಿ ವಿನಿಯೋಗವಾಗುತ್ತದೆ? ತಾವು ವಾಪಸು ಕೊಡುವಂತಹ ಷೇರುಗಳೇ ಅಥವಾ ಅಲ್ಲೇ ಜೀರ್ಣವಾಗುವಂತಹ ಷೇರುಗಳೇ? ಅಥವಾ ಬೇರೆ ಉಪಯೋಗಕ್ಕೆ ಬಳಸುವಂತಹ ಷೇರು ಬಂಡವಾಳವೇ ಎಂಬ ಬಗ್ಗೆ ಸಹ ಉತ್ತರ ಕೊಡಬೇಕೆಂದು ಕೇಳಿಕೊಂಡು ಈ ವ್ಯವಹಾರದ ಬಗ್ಗೆ ಸರ್ಕಾರದವರು ಒಂದು ನ್ಯಾಯಾಂಗ ವಿಚಾರಣೆಗೆ ಇದನ್ನು ಗುರಿಪಡಿಸಬೇಕೆಂದು ಹೇಳಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ.—ಒಂದು ಮಾತು ಹೇಳುತ್ತೇನೆ, ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳಿದ ಒಂದೆರಡು ಮಾತುಗಳನ್ನು ಪುಷ್ಟೀಕರಿಸುತ್ತಾ ಮಾನ್ಯ ಉಪಮಂತ್ರಿಗಳಿಗೆ ಕೇಳುತ್ತೇನೆ, ಅವರು ಜವಾಬು ಕೊಡಬೇಕಾದರೆ ನಾನು ಎತ್ತಿತಕ್ಕ ಪ್ರಶ್ನೆಗಳಿಗೆ ನೇರವಾದ ಜವಾಬನ್ನು ಕೊಡುತ್ತಾರೆ ಎಂದು ನಿರೀಕ್ಷಣೆ ಮಾಡುತ್ತೇನೆ. ನನಗೆ ಗೊತ್ತಿದ್ದ ಹಾಗೆ ಸುಮಾರು 30 ಕೋಟಿ ರೂಪಾಯಿಗಳ ಬಂಡವಾಳವನ್ನು ಇದರಲ್ಲಿ ತೊಡಗಿಸಿದ್ದೀರಿ. ಇಷ್ಟು ಗೊಬ್ಬರ ಬೇಕೆಂದು ಯಾರು ಎಸ್ಟಿಮೇಟ್ ಮಾಡಿದರು ? ಇರಾಖ್ ಇರಾಖಿಗಳಲ್ಲಿಯೇ ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳತಕ್ಕ ಪರಿಸ್ಥಿತಿ ಬಂತೇ ? ಇದು ಒಳಅಂತರಂಗ ಗೊತ್ತಿರತಕ್ಕ ವಿಷಯವಾಗಿರುವುದರಿಂದ ಇದನ್ನು ಸ್ಪಷ್ಟಪಡಿಸಬೇಕು. ನಿನ್ನೆದಿವಸ ಮಾನ್ಯ ಸಭಾನಾಯಕರು ಇಲ್ಲಿ ಭಾಷಣವನ್ನು ಮಾಡಿ, ಅವರು ಸಾಧನೆ ಮಾಡಿರತಕ್ಕ ವಿಷಯಗಳನ್ನು ಹೇಳುತ್ತಾ ಇಷ್ಟೊಂದು ಹಣ ಸಾಲ ಕೊಟ್ಟಿದ್ದೇವೆ ಎಂದು ಹೇಳಿದರು. ನೋಡುವುದಕ್ಕೆ ಈ ಅಂಕಿಅಂಶಗಳು ಬಹಳ ಚೆನ್ನಾಗಿ ಕಾಣಬಹುದು. ಈ ಗೊಬ್ಬರದ ವಿಷಯದಲ್ಲಿ ಏನಾಗಿದೆ ಎಂದರೆ ಮನಾಪಲ ಇಟ್ಟುಕೊಂಡರು ಅದರ ಜೊತೆಗೆ ಖಾಸಗಿಯವರಿಗೆ ಸ್ವಲ್ಪ ಅದನ್ನು ವ್ಯಾಪಾರ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಖಾಸಗಿಯವರು ಇವರಿಗಿಂತ ಸ್ವಲ್ಪ ಕಡಿಮೆ ಬೆಲೆಗೆ ವ್ಯಾಪಾರ ಮಾಡಿರುವುದರಿಂದ ಇವರ ಗೊಬ್ಬರ ಮಾರ್ಕೆಟ್‌ನಲ್ಲಿ ವ್ಯಾಪಾರವಾಗುತ್ತಾ ಇಲ್ಲ. ಇವರು ತರಿಸಿರುವುದು ಇತಿಮಿತಿ ಇಲ್ಲದೇ ತರಿಸಿದ್ದಾರೆ. ನಮ್ಮ ರೈತರು ಈ ಗೊಬ್ಬರದ ಖಾರ ಹೊರಟು ಹೋಗಿದೆ, ಕಟ್ಟು ಹೋಗಿ ನಾಥ ಬರುತ್ತಿದೆ, ಆದ್ದರಿಂದ ಇದು ನಮಗೆ ಬೇಡ ಎಂದು ಹೇಳುತ್ತಾರೆ. ಎರಡನೆಯುದಾಗಿ ಖಾಸಗಿಯವನು ಮುಗ್ಗಲನಲ್ಲೇ ಕುಳಿತಿದ್ದಾನೆ, ಅವನು ಮಾರತಕ್ಕ ಗೊಬ್ಬರದ ಬೆಲೆ ಕಡಿಮೆ ಬೆಲೆ ಇದೆ. ಈ ಒಂದು ವ್ಯವಸ್ಥೆಯನ್ನು ಯಾವ ರೀತಿ ಮಾಡಿದರು ಎಂಬುದನ್ನು ಮಾನ್ಯ ಉಪಮಂತ್ರಿಗಳು ಹೇಳಬೇಕು. ಕಾಸ್ಟ್ ಅಕೌಂಟ್ ಲೆಕ್ಕ ಹಾಕಿದಾಗ ಹೊರಗಡೆಯಿಂದ ಬರುವ ಗೊಬ್ಬರದ ಕಾಸ್ಟ್ ಪ್ರೈಸ್ ಏನಿದೆ ಇದು ಕೊನೆಗೆ ಕನ್ಸ್ಯೂಮರ್ ಆದ ರೈತನ ಮೇಲೆ ಬೀಳುವಾಗ ಎಕ್ಸ್ ಪ್ಲಸ್ 35 ರುಪೀಸ್‌ನಂತೆ ಬಿದ್ದಿದೆ. ಎಕ್ಸ್ ಪ್ಲಸ್ 35 ರುಪೀಸ್ ಬೀಳಬೇಕಾದರೆ ಅದನ್ನು ನೀವು ಎಲ್ಲೆಲ್ಲ, ಯಾವ ಯಾವ ಹಂತದಲ್ಲಿ ಜಾಸ್ತಿ ಮಾಡಿದ್ದೀರಿ, ಹೇಗೆ ಆಯಿತು ಎಂಬುದನ್ನು ನೋಡಿದರೆ ಟ್ರಾನ್ಸ್‌ಪೋರ್ಟ್ ಇದೆಲ್ಲಾ ಬೀಳಬೇಕಾದ್ದೆ, ಬಿದ್ದಿದೆ, ಇದರಲ್ಲಿ ಸುಮಾರು ರೂಪಾಯಿನಲ್ಲಿ 14 ಆಣೆ ಭಾಗ ಈ ಸಹಕಾರ ಸಂಘಗಳಲ್ಲಿ ಸೆಂಟ್ರಲ್ ಬ್ಯಾಂಕ್ ಆದ ಅಪೆಕ್ಸ್ ಬ್ಯಾಂಕು ಅಲ್ಲಿಂದ ಕೆಳಗೆ ಡಿಸ್ಟ್ರಿಕ್ಟ್ ಬ್ಯಾಂಕು, ಅಲ್ಲಿಂದ ಕೆಳಗೆ ತಾಲ್ಲೂಕು ಸೊಸೈಟಿ, ಇತ್ಯಾದಿ ಇತ್ಯಾದಿಯಾಗಿ ಹೋಗಿ ಕನ್ಸ್ಯೂಮರ್‌ಗೆ ಸಿಕ್ಕಬೇಕಾದರೆ ಇಷ್ಟು ದುಡ್ಡು ಜಾಸ್ತಿಯಾಗಿದೆ. ಇನ್ನೊಂದು ವಿಷಯವನ್ನು ಈ ಮಾನ್ಯ ಸಭೆ ಗಮನಿಸಬೇಕು. ಸೆಂಟ್ರಲ್ ಸೊಸೈಟಿಯವರು ಒಬ್ಬನಿಂದ ಒಂದು ಕ್ವಿಂಟಾಲ್‌ಗೆ 5 ರೂಪಾಯಿ ಜಾಸ್ತಿ ತೆಗೆದುಕೊಂಡು ಅದನ್ನು ಸೆಂಟ್ರಲ್ ಸೊಸೈಟಿಯ ಷೇರಿಗೆ ಅಂತ ಹಾಕಿದ್ದಾರೆ. ಸೆಂಟ್ರಲ್ ಸೊಸೈಟಿಯ ಷೇರು ಮೊಬಲಗು ಕೊಡುವವನು ರೈತ. ಈ ರೈತನಿಂದ ತೆಗೆದುಕೊಂಡ ಲಾಭ ಅವರ ಲಾಭ. ಬತ್ತುವ ಹಾಗಿಲ್ಲ, ಬೆಳೆಯುವ ಹಾಗೆ ಇಲ್ಲ. ತಮಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಂಡು ಅವರ ಸಹಾಯವನ್ನು ಪಡೆದುಕೊಂಡು ಇಷ್ಟೊಂದು ಅನ್ಯಾಯ ಮಾಡಿದ್ದಾರೆ. ಇದರ ವಿಚಾರಣೆಯನ್ನು ಮಾಡಿದರೆ ಇಲ್ಲರತಕ್ಕ ತಿಮಿಂಗಲಗಳು, ಯಾವ ಯಾವ ರೀತಿಯಲ್ಲಿ ಸೇರಿಕೊಂಡಿವೆ ಅನ್ನುವುದು ಈಚೆಗೆ ಬಂದರೆ ಮೈನಸ್ಸರು ದೇಶದಲ್ಲಿ ಈ ಸರ್ಕಾರ ಇರಲಿಕ್ಕೆ ಲಾಯಕ್ ಅಲ್ಲ, ಇದು ಜನಗಳ ಶೋಷಣೆಯನ್ನು ಮಾಡತಕ್ಕ ಕಾರ್ಯ ಕೈಕೊಂಡಿದೆ ಎಂಬುದು ಬಯಲಿಗೆ ಬರುತ್ತದೆ.

ಇನ್ನೊಂದು ವಿಷಯ ಏನೆಂದರೆ ಗೊಬ್ಬರ ಹಾಕಿದ್ದಾರೆ, ದಾವಣಗೆರೆಯ ಒಂದರ ವಿಷಯ ನನಗೆ ಗೊತ್ತು, ಅಲ್ಲಿ ಸುಮಾರು ಒಂದು ತಿಂಗಳಿಗೆ ಐದೂವರೆ, ಆರು ಸಾವಿರ ರೂಪಾಯಿ ಗೋಡೌನ್ ಚಾರ್ಜಸ್ ಕೊಡಬೇಕು. ಅವರು ಇದನ್ನು ತೆಗೆದು ಹಾಕರಿ, ನಮಗೆ ಗೊಬ್ಬರ ಬೇಡ, ಗೋಡೌನ್ ಚಾರ್ಜಸ್ ಕೊಡುವುದಕ್ಕಾಗುವುದಿಲ್ಲ ನಮ್ಮ ಷೇರು ಬಂಡವಾಳ ಇರುವುದೆಲ್ಲಾ 50-60 ಸಾವಿರ ರೂಪಾಯಿ ಇರಬಹುದು, ಅದನ್ನು ನಾವು ಇದರ ಬಾಡಿಗೆಗೇ ಕೊಟ್ಟರೆ ಹೇಗೆ ಉಳಿದುಕೊಳ್ಳಬೇಕು ಎಂದು ಹೇಳಿ ರಿಜಿಸ್ಟ್ರಾರ್‌ರವರಿಗೆ ನೋಟೀಸ್ ಕೊಟ್ಟಿದ್ದಾರೆ. ಇದನ್ನು ಇಡಬೇಡಿ ಎಂದು ಹೇಳಿದ್ದಾರೆ. ಈಗ ಅದನ್ನು ತೆಗೆದುಕೊಂಡು ಹೋಗಿ ಮುನಿಸಿಪಾಲಿಟಿಗೆ ಹಾಕುವುದಕ್ಕೂ ದಾರಿ ಇಲ್ಲ. ಇಂತಹ ಒಂದು ಪರಿಸ್ಥಿತಿ ಏನಿದೆ ಇದರ ವಿಚಾರಣೆಗೆ ಒಂದು ಸ್ಪೆಷಲ್ ಆಡಿಟ್ ಸೆಲ್ ಮಾಡುವುದರ ಜೊತೆಗೆ ಈಗ ಏನು ಆಗಿದೆ ಇದರ ವಿಷಯದಲ್ಲಿ ತಾವು ಏನು ಹೇಳುತ್ತೀರಿ ? ಇದು ಸರಿಯೇ ? ಅಲ್ಲಮೇಟ್ ಆಗಿ ಏಷ್ಟು ಲುಕ್ಸಾನಾಗಿದೆ ?

ಈಗ ಕೈಗಾರಿಕಾ ಸಂಸ್ಥೆಯಲ್ಲಿ ಏನೇನಾಗಿದೆ ಎನ್ನುವುದನ್ನು ಹೇಳುತ್ತೇನೆ. ಸಹಕಾರ ಸಂಘಗಳಲ್ಲಿ ಅಚಲ ವಿಶ್ವಾಸ, ಅಚಲ ಪ್ರೇಮ ಇಟ್ಟುಕೊಂಡು ನಾನು 1928 ನೇ ಇಸವಿಯಿಂದಲೂ ಕೆಲಸ ಮಾಡುತ್ತಿದ್ದೆ. ಇತ್ತೀಚೆಗೆ ಆಗುತ್ತಾ ಇರತಕ್ಕಂಥಾದ್ದನ್ನು ನೋಡಿದರೆ ಈಗ ಈ ಸಂಸ್ಥೆ

ಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪನೀಸ್ ಅವರ ಹತ್ತಿರ ಮಾಡಿಸೋಣ ಅನ್ನುವಷ್ಟು, ಬೇಜಾರಾಗಿದೆ. ರಿಜಿಸ್ಟ್ರಾರ್ ಆಫ್ ಕೋಆಪರೇಟೀವ್ ಸೊಸೈಟೀಸ್ ಅವರ ಸಹವಾಸವೇ ಬೇಡ ಅನಿಸುತ್ತದೆ, ಅವರ ಹಿಡಿತವೇ ಬೇಡ ಅನಿಸುವಷ್ಟು ಬೇಜಾರಾಗಿಬಿಟ್ಟಿದೆ. ಅದನ್ನು ತಿಳಿದುಕೊಂಡು ಆದಷ್ಟು ಜಾಗ್ರತೆ ಅಂಕಿಅಂಶಗಳನ್ನು ಕೊಡುತ್ತಾರೆಂದು ಹೇಳಿ ಶ್ರೀಮಾನ್ ಕೆ. ಹೆಚ್. ಪಾಟೀಲರು ತಂದಿರತಕ್ಕಂಥ ಅರ್ಧಗಂಟೆಯ ಕಾಲ ಚರ್ಚೆಯನ್ನು ಪುಷ್ಟೀಕರಿಸುತ್ತೇನೆ.

†ಶ್ರೀ ಬಿ. ಎಲ್. ಗೌಡ (ಸಹಕಾರಿ ಶಾಖೆಯ ಉಪಮಂತ್ರಿಗಳು).— ಮಾನ್ಯ ಸಭಾಪತಿಗಳೇ, ಶ್ರೀಮಾನ್ ಸಿ. ಕೆ. ರಾಜಯ್ಯಶೆಟ್ಟರು ಈ ಸಭೆಯಲ್ಲಿ ಪ್ರಸ್ತಾಪಿಸಿದ ರಾಜ್ಯದ ಮಾರಾಟ ಸಂಘದಲ್ಲಿರುವ ರಾಸಾಯನಿಕ ಗೊಬ್ಬರದ ವ್ಯಾಪಾರದ ಪ್ರಶ್ನೆ ಬಗ್ಗೆ ಈ ಒಂದು ಚರ್ಚೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಉತ್ತರಕೊಡಲು ನನಗೆ ಕಾಲಾವಕಾಶ ಬೇಕು. ಆದಕ್ಕೋಸ್ಕರ ತಾವು ಸಹಕರಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ರಾಜ್ಯದ ಮಾರಾಟ ಸಂಘದಲ್ಲಿರುವ ರಾಸಾಯನಿಕ ಗೊಬ್ಬರದ ಇತಿಹಾಸ ಹೀಗಿದೆ. 1950 ರಿಂದ 1960ನೇ ಇಸವಿಯವರೆಗೂ ಗೊಬ್ಬರವನ್ನು ವ್ಯವಸಾಯ ಇಲಾಖೆಯವರು ಶೇಖರಣೆ ಮಾಡಿ ಮಾರಾಟ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರಲ್ಲಿ ದಾಸ್ತಾನಿದ್ದ ಗೊಬ್ಬರವನ್ನು ರೈತರಿಗೆ ಉಪಯೋಗ ಮಾಡುವ ಬಗ್ಗೆ ವಿಸ್ತರಣೆ ಮತ್ತು ಪ್ರಚಾರ ಮಾಡುವಿಕ್ಕೆ ಸಾಕಷ್ಟು ರೀತಿಯಲ್ಲಿ ಕಾರಾವಕಾಶ ಇಲ್ಲವೆಂದು ಹೇಳಿ 1960ರಲ್ಲಿ ಕೋ-ಆಪರೇಟೀವ್ ಇಲಾಖೆಗೆ ವರ್ಗ ಮಾಡಿದರು. 1961 ರಿಂದ ಈಚೆಗೆ ಗೊಬ್ಬರದ ವಹಿವಾಟು ಸಹಕಾರಿ ರಂಗದಲ್ಲಿ ನಡೆಯುತ್ತಾ ಇದೆ. ಆದರೂ ಸಹ ಗೊಬ್ಬರವನ್ನು ಎಷ್ಟು ಕೊಂಡುಕೊಳ್ಳಬೇಕು. ಯಾವ ವರ್ಷದಲ್ಲಿ ಎಷ್ಟು ಕೊಂಡುಕೊಳ್ಳಬೇಕು. ಈ ಒಂದು ಜವಾಬ್ದಾರಿ ಮಾತ್ರ ವ್ಯವಸಾಯ ಇಲಾಖೆಯವರ ಮುಖೇನ ನಡೆಯುತ್ತಾ ಇದೆಯೇ ಹೊರತು ನೇರವಾಗಿ ರಾಜ್ಯದ ಮಾರಾಟ ಸಹಕಾರ ಸಂಘದವರೇ ಮಾಡಿಲ್ಲ. ಅದನ್ನು ಯಾವಾಗ ಕೊಂಡುಕೊಳ್ಳಬೇಕಾದರೂ ನಿರ್ದೇಶನ ಕೊಡುವವರು ನಿರ್ಧಾರ ಮಾಡುವವರು ವ್ಯವಸಾಯ ಇಲಾಖೆಯವರೇ ಎಂದು ಮತ್ತೊಮ್ಮೆ ಈ ಸಭೆಗೆ ಹೇಳಬಯಸುತ್ತೇನೆ. ಆದುದರಿಂದ ಗೊಬ್ಬರ ಕೊಳ್ಳುವುದಕ್ಕೆ ನಿಗದಿ ಮಾಡುವವರು ವ್ಯವಸಾಯ ಇಲಾಖೆಯವರು ಎಂದು ಹೇಳಬಯಸುತ್ತೇನೆ.

ಇದಾದ ಮೇಲೆ ಈ ಒಂದು ಸೊಸೈಟಿಯಲ್ಲಿ ಎಷ್ಟೆಷ್ಟು ಲಾಭಾಂಶವನ್ನು ಕೊಟ್ಟಿದ್ದಾರೆ ಎನ್ನುವ ಅಂಕಿಸಂಖ್ಯೆಗಳನ್ನು ಶ್ರೀಮಾನ್ ಸಿದ್ದವೀರಪ್ಪನವರು ಕೇಳಿದ್ದಾರೆ. ಅದನ್ನು ಹೇಳುತ್ತೇನೆ. 1963-64 ರಲ್ಲಿ ಸ್ಟೇಟ್ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯವರು 6 ರೂಪಾಯಿ ಮಾರ್ಜಿನ್‌ನಲ್ಲಿ ಮಾರಿದ್ದಾರೆ. ತಾಲ್ಲೂಕು ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯವರು 18 ರೂಪಾಯಿನಂತೆ ಮಾರ್ಜಿನ್ ಇಟ್ಟು ಕೊಡುತ್ತಾ ಇದ್ದಾರೆ. ಪ್ರೈಮರಿ ಸಹಕಾರ ಸಂಘದವರು 16 ರೂಪಾಯಿನ ಮಾರ್ಜಿನ್ ಇಟ್ಟುಕೊಂಡು ಕೊಡುತ್ತಾ ಇದ್ದಾರೆ. 1964 ರಲ್ಲಿ ಇದು ಕಡಿಮೆ ಎಂದು ತಿಳಿದುಕೊಂಡು ಸರ್ಕಾರದವರು ರಿವೈಸ್ ಮಾಡಿದ ಮೇಲೆ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು 10 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯವರು 11 ರೂಪಾಯಿ, ಪ್ರೈಮರಿ ಮಾರ್ಕೆಟಿಂಗ್‌ನವರು 9 ರೂಪಾಯಿನಂತೆ ಮಾರ್ಜಿನ್ ಇಟ್ಟುಕೊಂಡು ಕೊಡುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ಗೊಬ್ಬರದ ಮಾರಾಟ ಸಂಘದವರ ಮಾರ್ಜಿನ್ ಬಹಳ ಕಡಿಮೆ ಇದೆ. ಅದರಲ್ಲಿ ಅಪರೇಷನ್ ಕಾಸ್ಟ್ ಬಹಳ ಜಾಸ್ತಿ. ಇದು ಮೈಸೂರಿನ ರಾಜ್ಯದಲ್ಲಿ ಒಂದರಲ್ಲೇ ಅಲ್ಲ. ಇಡೀ ಭರತಖಂಡದಲ್ಲಿ ಎರಡಾ ರಾಜ್ಯಗಳಲ್ಲಿ ಸಹಕಾರಿ ಮಾರ್ಕೆಟಿಂಗ್ ಸೊಸೈಟಿ ಮುಖಾಂತರ ಓಪನ್ ಆದ ಸಹಕಾರೀ ಸಂಸ್ಥೆಗಳಿಗೆ ಹೆಚ್ಚಿನ ಮಾರ್ಜಿನ್ ಕೊಡಬೇಕೆಂದು ಕೇಂದ್ರ ಸರ್ಕಾರದ ಒಂದು ಸಮಿತಿ ಶಿಫಾರಸ್ಸು ಮಾಡಿದೆ. ಅವರು ಯಾರು ಎಂದರೆ ಕೇಂದ್ರ ಸರ್ಕಾರದ ವ್ಯವಸಾಯದ ಕಾರ್ಯದರ್ಶಿಗಳಾದ ಶಿವರಾಮನ್ ಅವರ ಅಧ್ಯಕ್ಷತೆಯಲ್ಲಿ ಸೇರಿದ ಒಂದು ಸಮಿತಿ ಶಿಫಾರಸ್ಸು ಮಾಡಿದ ಪ್ರಕಾರ ಟನ್ ಒಂದಕ್ಕೆ 50 ರೂಪಾಯಿನಂತೆ ಮಾರಿದರೆ ಸ್ಟೇಟ್ ಮಾರ್ಕೆಟಿಂಗ್‌ನವರಿಗೆ 15 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಮತ್ತು ಪ್ರೈಮರಿ ಮಾರ್ಕೆಟಿಂಗ್ ಎರಡೂ ಸೇರಿ 35 ರೂಪಾಯಿ. ಅಂದರೆ ಟನ್ ಒಂದಕ್ಕೆ 35 ರೂಪಾಯಿನಂತೆ ಮಾರ್ಜಿನ್ ಇಟ್ಟುಕೊಂಡು ಮಾರುತ್ತಾರೆ. ಇಷ್ಟೆಲ್ಲಾ ನಾವು ಮಾಡಿದರೂ ಕೂಡ ಈ ಹಸಿರು ಕ್ರಾಂತಿ ಗೊಬ್ಬರಕ್ಕೆ ವಿಪರೀತ ಬೇಡಿಕೆ ಬರುತ್ತಿತ್ತು. ಎರಡು ವರ್ಷದಿಂದೀಚೆಗೆ ಗೊಬ್ಬರದ ಪರಿಸ್ಥಿತಿ ಹೇಗಿತ್ತು ಎಂದರೆ ತುಂಬಾ ಡಿಮ್ಯಾಂಡ್ ಆಗಿ ಬ್ಲಾಕ್ ಮಾರ್ಕೆಟ್‌ನಲ್ಲೂ ಕೂಡ ಹೋಗಿ ತರುತ್ತಾ ಇದ್ದರು. ಈ ರೀತಿ

(ಶ್ರೀ ಬಿ. ಎಲ್. ಗೌಡ)

ಡಿವ್ಯಾಂಡು ಇದ್ದುದರಿಂದ ಹೊರದೇಶವಿಂದ ಬೇಕಾದಷ್ಟು ಆಮದು ಮಾಡಿದರೂ ರಾಜ್ಯ ಸರ್ಕಾರದವರು ವ್ಯವಸಾಯ ಇಲಾಖೆಯು ಮುಖಾಂತರವೇ ಸಾ ್ಕ ಮಾಡಿದರು. ಹೋದವರ್ಷದಿಂದೀಚೆಗೆ ನರ್ಷಕ್ಕೆ 1½ ಲಕ್ಷ ಟನ್ ಖರ್ಚಾಗುತ್ತಾ ಇದೆ. ಈ ಆಧಾರದ ಮೇಲೆ ಲೆಕ್ಕ ತೆಗೆದುಕೊಂಡರೆ 2½ ಲಕ್ಷ ಟನ್‌ಗಿಂತ ಜಾಸ್ತಿ ಖರ್ಚಾಗುವುದಿಲ್ಲ. ಇತ್ತೀಚೆಗೆ ಕಾಫಿ ಕಂಪನಿಯವರು ಮನೆ ಬಾಗಿಲಿಗೆ ಬಂದು ಕಡಿಮೆ ದರದಲ್ಲಿ ಕೊಡುತ್ತಾ ಇದ್ದಾರೆ. ಅವರು ಕೊಡುತ್ತಾ ಇದ್ದಾರೆ ನಮ್ಮ ಕೈಯ್ಯಲ್ಲಿ ಏತಕ್ಕೆ ಆಗುವುದಿಲ್ಲ ಎಂದು ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದರು. ಕಂಪನಿಗಳಲ್ಲೂ ಸಾ ್ಕ ಉಳಿದಿದೆ. ಖಾನಗಿಯವರಿಗಿಂತ ರೇಟು ಜಾಸ್ತಿ ಆನ್ನುವುದನ್ನು ನಾನು ಡಿನ್ಯೂಟ್ ಮಾಡುವುದಿಲ್ಲ. ಗೌರ್ನಮೆಂಟ್ ಅಂದರೆ ಚೇಕಿಂಗ್‌ನವರು ಖಾನಗಿಯವರೊಂದಿಗೆ ಪೈಪೋಟಿ ನಡೆಸುವುದು ಕಷ್ಟ. ಪ್ರೈವೇಟ್‌ನವರು ಮಾರ್ಜಿನ್‌ಕೂಡ ಬಿಟ್ಟು ಮಾರಬಹುದು. ನಾವು ಆರೀತಿ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಖಾನಗಿಯವರ ಪೈಪೋಟಿಯಿಂದ ಸಹಕಾರಿ ಸಂಘಕ್ಕೆ ನಷ್ಟವಾಯಿತು ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇದಾದ 2 ವರ್ಷದಲ್ಲಿ ರಾಜ್ಯ ಸರ್ಕಾರದವರೇ ಗೊಬ್ಬರವನ್ನು ಕೊಂಡು ಇಡುತ್ತಾ ಇದ್ದರು. ಸ್ಟೇಟ್ ಮಾರ್ಕೆಟಿಂಗ್‌ನವರು ಕನ್‌ಸೈನ್‌ಮೆಂಟ್ ಬೇಸಿಸ್‌ಮೇಲೆ ಕೊಡುತ್ತಾ ಇದ್ದರು. 1960 ನೇ ಇಸವಿ ಸೆಪ್ಟೆಂಬರ್‌ನಲ್ ಕ್ಯಾಷ್ ಅಂಡ್ ಕ್ಯಾರಿ ಬೇಸಿಸ್‌ಮೇಲೆ ಕೊಡಬೇಕೆಂದು ತೀರ್ಮಾನವಾಯಿತು. ಇದಾದ ಮೇಲೆ ಫೂರ್ಣ ಜವಾಬ್ದಾರಿ ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಬಂತು, ಅದರ ಮೇಲೆ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಮೊದಲ 2 ವರ್ಷದ ಲಾಭಾಂಶ ಈ ರೀತಿ ಇದೆ 1966-67 ರಲ್ಲಿ ಆಗಿರುವ ಲಾಭ 18,43,371-52 ರೂಪಾಯಿಗಳು, ಡಿವಿಡೆಂಡ್ 5 ಪರ್ಸೆಂಟು ಬಂದಿದೆ. 1967-68 ರಲ್ಲಿ ಆಗಿರುವ ಲಾಭ 2,47,974-20 ರೂಪಾಯಿಗಳು, ಡಿವಿಡೆಂಡ್ 4 ಪರ್ಸೆಂಟು ಬಂದಿದೆ. ಇನ್ನು 1968-69 ರಲ್ಲಿ ಬ್ಯಾಲೆನ್ಸ್ ಷೀಟ್ ಪ್ರಕಾರ 12 ಲಕ್ಷ 59 ಸಾವಿರ ರೂಪಾಯಿಯಷ್ಟು ಹಾನಿಯಾಗಿದೆ. ಈ ರೀತಿ ಲುಕ್ಸಾನು ಆಗುವುದಕ್ಕೆ ಕಾರಣ ಏನೆಂದು ಶ್ರೀ ಸಿದ್ದವೀರಪ್ಪನವರು ಕೇಳಿದರು. ಕಾರಣ ಏನೆಂದರೆ 2½ ಲ ್ ಟನ್ನಿನಷ್ಟು ಗೊಬ್ಬರ ದಾಸಾ ್ತನು ಇದ್ದಿತು. ಇದಕ್ಕೆ ರಾಜ್ಯದ ಎರಾ ್ಲ ಕಡೆಗಳಲ್ಲೂ ವೇರ್‌ಹೌಸಿಂಗ್ ಥಾರ್ಜಸ್ ಕೊಡಬೇಕು, ಬ್ಯಾಂಕಿಗೆ ಇಂಟರೆಸ್ಟ್ ಕೊಡಬೇಕು, ವಾಚ್ ಅಂಡ್ ವಾರ್ಡ್‌ಗೆ ಕೊಡಬೇಕು, ಇನ್‌ಷೂರೆನ್ಸ್ ಕಟ್ಟ ಬೇಕು. ಇಷ್ಟೆಲ್ಲಾ ಇರುವುದರಿಂದ ಲುಕ್ಸಾನು ಆಗಿದೆಯೇ ಹೊರತು ಬೇರೆ ಯಾವ ಕಾರಣವೂ ಇಲ್ಲ ಎಂದು ನಾನು ಮಾನ್ಯ ಸಿದ್ದವೀರಪ್ಪನವರಿಗೆ ಹೇಳಬಯಸುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.—ಈ ರೀತಿ ಲುಕ್ಸಾನು ಆಗುವುದಾದರೆ ಅದನ್ನು ಧರ್ಮವಾಗಿ ಕೊಟ್ಟುಬಿಡಿ. ಇಲ್ಲದಿದ್ದರೆ 50 ಪರ್ಸೆಂಟು ಕಡಿಮೆ ಮಾಡಿ ಕೊಟ್ಟುಬಿಡಿ.

ಶ್ರೀ ಬಿ. ಎಲ್. ಗೌಡ.—ನಮ್ಮ ಸ್ನೇಹಿತರು ಕೆಲವು ವಿಷಯುಗಳನ್ನು ಈ ಸಭೆಯು ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸಾ ್ತಪ ಮಾಡಬಯಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಶ್ರೀಮಾನ್ ಸಿದ್ದವೀರಪ್ಪನವರು ಮುಖ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹೀಗಾದರೆ ನಮ್ಮ ಬಂಡವಾಳವೇ ಕೊಚ್ಚಿ ಹೋಗುತ್ತದೆ. ಅವರ ಸಲಹೆ ಒಳ್ಳೆಯದು ಎಂದು ನಾನು ಪುಷ್ಟೀಕರಿಸುತ್ತೇನೆ.

ಶ್ರೀ ಬಿ. ಎಲ್. ಗೌಡ.—ಇನ್ನು ಷೇರ್ ಕ್ಯಾಪಿಟಲ್ ಬಗ್ಗೆ ಶ್ರೀಮಾನ್ ಕೆ. ಹೆಚ್. ಪಾಟೀಲರು ಹೇಳಿದ ಹಾಗೆ ಇದಕ್ಕೆ ಬಂಡವಾಳ 1 ಕೋಟಿ 2 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಹಾಕಿದ್ದಾರೆ. ಎನ್. ಸಿ. ಡಿ. ಸಿ. ಯವರು 7 ಲಕ್ಷ 72 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಮೊದಲು ರಾಜ್ಯ ಸರ್ಕಾರದವರು ಇದಕ್ಕೆ ಬಂಡವಾಳ ಹಾಕಿ ಈ ಮಾರ್ಕೆಟಿಂಗ್ ಸೊಸೈಟಿಗೆ ಕನ್‌ಸೈನ್‌ಮೆಂಟ್ ಬೇಸಿಸ್‌ಮೇಲೆ ಕೊಟ್ಟರು.

8-00 P. M.

ಈಗ ರಿಜರ್ವ್ ಬ್ಯಾಂಕಿನಿಂದ ಬೇರೆಬೇರೆ ಕಮರ್ಷಿಯರ್ ಬ್ಯಾಂಕುಗಳಿಂದ ಹಣವನ್ನು ಸಾಲ ಪಡೆಯಬೇಕಾದರೆ ಆ ಸಂಸ್ಥೆಗಳಿಗೆ ಬಾರೋಯಿಂಗ್ ಕ್ಯಪಾಸಿಟಿ ಇರಬೇಕು.

ಶ್ರೀ ಕೆ. ಎಜ್. ಪಾಟೀರ್.—ನಾವು ಒಂದು ಲಕ್ಷ ರೂಪಾಯಿ ಬಂಡವಾಳ ಅವರಿಗೆ ಕೊಡಬೇಕಾದರೆ, ನಿಮಗೂ ಒಂದು ಲಕ್ಷ ರೂಪಾಯಿ ಬಂಡವಾಳ ಇರಬೇಕು. ಅನುಕೂಲ ಇದ್ದವರಿಗೆ

ಒಂದು ಕೋಟಿ ಕೊಟ್ಟಿದ್ದೀರಿ What is proportion in which you are contributing ?

ಶ್ರೀ ಬಿ. ಎಲ್. ಗೌಡ.—ವಿಶೇಷವಾದಂಥ ಸಂದರ್ಭದಲ್ಲಿ ರಾಜ್ಯದ ಮಾರಾಟ ಸಹಕಾರ ಸಂಘಗಳಿಗೆ ಬಾರೋಯಿಂಗ್ ಕ್ಯಪಾಸಿಟಿ ಬರಲಿಯೆಂದು ಒಂದು ಕೋಟಿ ಎರಡು ಲಕ್ಷ ರೂಪಾಯಿ ಗಳಷ್ಟು ಬಂಡವಾಳ ಗೊಬ್ಬರಕ್ಕಾಗಿ ಒದಗಿಸಬೇಕಾಗಿ ಬಂತು. ಅಷ್ಟು ಹಣವನ್ನು ರಾಜ್ಯಸರ್ಕಾರದವರು ಕೊಟ್ಟಿದ್ದಾರೆ. ಎನ್.ಸಿ.ಡಿ.ಸಿ.ಯವರಿಂದ 7 ಲಕ್ಷ 72 ಸಾವಿರ ರೂಪಾಯಿಗಳು ಬಂದಿದೆ.

ಇನ್ನು ಡೆವಿಡೆಂಡನ್ನು 1966–67ನೇ ಮತ್ತು 1967–68ನೇ ಸಾಲಿಗೆ ಸೇಕಡ 5 ಮತ್ತು ಸೇಕಡ 4 ರಂತೆ ಕ್ರಮವಾಗಿ ಹಂಚಿದ್ದೇವೆ.

ಇನ್ನು ಆಡಿಟ್ ರಿಪೋರ್ಟ್ ಬಗ್ಗೆ ಹೇಳುವುದಾದರೆ, ಜಾಯಿಟವ್ ಆಡಿಟ್ ವರದಿ ಪ್ರಕಾರ ಸೇಕಡ 12ರಷ್ಟು ಲುಕ್ಸಾನು ಆಗಿದೆ, ಅದಕ್ಕೆ ಕಾರಣವೇನೆಂದು ಕೇಳಿದ್ದಾರೆ. ಯಾರೋ ಮಂತ್ರಿಗಳ ಪ್ರಭಾವಕ್ಕೊಳಗಾಗಿ ಗೊಬ್ಬರವನ್ನು ಕೊಂಡುಕೊಂಡಿದ್ದಾರೆಂದು ಹೇಳಿದರು. ಇದಕ್ಕೆ ಉತ್ತರವನ್ನು ನಾನು ಮೊದಲೇ ತಿಳಿಸಿದ್ದೇನೆ ಇದರಲ್ಲಿರತಕ್ಕದ್ದು ಬಹುಭಾಗ ಇಂಪೋರ್ಟೆಡ್ ಫರ್ಟಿಲೈಜರ್ ಆದ್ದರಿಂದ ಯಾರೂ ಯಾರ ಪ್ರಭಾವಕ್ಕೂ ಒಳಗಾಗಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಇದಕ್ಕೆ ಯಾರಾದರೂ ಟೆಂಡರ್ ಹಾಕಿದರೋ ? ಅಥವಾ ಇದಕ್ಕೆ ಯಾವ ರೀತಿ ಟೆಂಡರ್ ಕರೆದಿದ್ದೀರಿ ?

ಶ್ರೀ ಬಿ. ಎಲ್ ಗೌಡ.—ಈ ವ್ಯಾಪಾರ ಮಾಡಬೇಕಾದರೆ, ಏನೇನು ಕಂಡೀಷನ್ಸ್, ಹಾಕ ಬೇಕಾಗಿತ್ತೋ ಅವನ್ನು ಹಾಕಿದ್ದೇವೆ. What a prudent man can observe the conditions, we have observed.

ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಗೊಬ್ಬರಕ್ಕೆ ಸಂಬಂಧಪಟ್ಟ ಕೆಲವಾರು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆಲ್ಲಾ ನನ್ನಲ್ಲಿ ಉತ್ತರವಿಲ್ಲ.

ರಾಜ್ಯಸರ್ಕಾರದವರು ತಮ್ಮ ಫಾರೆಯರ್ಸ್ ಯಾರು ಇದ್ದಾರೆಯೋ ಅವರಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಬಂಡವಾಳ ಕೊಟ್ಟಿದ್ದಾರೆಂದು ಹೇಳಿದರು. ಇದು ಸತ್ಯಕ್ಕೆ ಬಹಳ ದೂರವಾದ ಮಾತು. ಇದು ಎರೆಕ್ಕೆಡ್ ಬಾಡಿ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು,

ಶ್ರೀ ಕೆ. ಎಚ್. ಪಾಟೀಲ್.—ಯಾವುದೇ ಒಂದು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಿಗೂ ನನಗೂ ಸಂಬಂಧವಿದೆಯೆಂದು ಇವರು ಹೇಗೆ ಹೇಳುತ್ತಾರೆ ?

ಶ್ರೀ ಬಿ. ಎಲ್. ಗೌಡ.—ಅವರು ಆಫೀಸರ್ಸ್ ಆಗಿರುತ್ತಾರೆ. ಮಾನ್ಯ ಸದಸ್ಯರು ಅವರನು ನಮ್ಮ ಫಾಲೋಯರ್ಸ್ ಎಂದು ಹೇಳುತ್ತಾರೆ. ಹಾಗಾದರೆ ನಾಳೆ ನೀವು ಅಧಿಕಾರಕ್ಕೆ ಬಂದರೆ ನೀವೂ ಅವರನ್ನು ಚಾರ್ಜಿಂಗ್ ಮಾಡುತ್ತೀರಾ ? ಅದು ಕಷ್ಟ.

ಇನ್ನು ಮಾನ್ಯ ಶ್ರೀ ಗೋಪಾಲಗೌಡರು ಯಾರೋ ಒಬ್ಬರ ಪ್ರೇರೇಪಣೆಯಿಂದ ಹೀಗೆ ಮಾಡಿ ದ್ದಾರೆಂದು ಹೇಳಿದ್ದಾರೆ. ವ್ಯವಸಾಯ ಇರಾಖೆಯವರು ಇವರ ನಲಕೆ ಮೂಲಕ ಸಾಲ ಕೊಟ್ಟ ದ್ದಾರೆ, ಅದರಿಂದ ಹೇಗೆ ರಾಭ ಬರುತ್ತದೆಂದು ಹೇಳಿದರು. ಅದಕ್ಕೆ ಉತ್ತರವನ್ನು ನಾನು ಮೊದಲೇ ಹೇಳಿದ್ದೇನೆ. ಮಾನ್ಯ ಸದಸ್ಯರಲ್ಲಿ ಕೆಲವರು ಹೇಳಿದ ಹಾಗೆ ಪ್ರತಿಯೊಂದಕ್ಕೂ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕಾಗಿಲ್ಲ. ಆಡಿಟರುಗಳಿಂದ, ಅಕೌಂಟೆಂಟ್ ಜನರಲ್ ಅವರಿಂದ, ಅವರ ಇಲಾಖೆಗಳಿಂದ ಲೆಕ್ಕಗಳು ಆಡಿಟ್ ಆಗುತ್ತವೆ. ಅದರಲ್ಲಿ ಒಂದುವೇಳೆ ನ್ಯೂನತೆಗಳಿದ್ದರೆ, ಖಂಡತ ವಾಗಿ ಯಾವ ಸೊಸೈಟಿಯೇ ಆಗಲೀ, ಅಧಿಕಾರವರ್ಗವಾಗಲೀ. ಯಾರೇ ಆಗಲಿ, ನಮ್ಮ ಪಕ್ಷದವರೇ ಆಗಿರಲಿ, ಅಂತಹವರ ಮೇಲೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅನೇಕ ಸಹಕಾರ ಸಂಘಗಳಲ್ಲಿ ನಮ್ಮ ಪಕ್ಷದವರಿದ್ದರೂ ಅವನ್ನು ಈಗ ಸೂಪರ್‌ಸೀಡ್ ಮಾಡಿದ್ದೇವೆ. ವಿರೋಧಪಕ್ಷದ ನಾಯಕರು ಮಾತನಾಡುವಾಗ ಫರ್ಟಿಲೈಜರ್ಸ್‌ನಲ್ಲಿ ಮಾನಾಪಲ ಆಗಿದೆಯೆಂದು ಹೇಳಿದರು. ನಾವು ಇಲ್ಲಿ ನ್ಯಾಯವಾಗಿ ರೈತರಿಗೆ ಅವನ್ನು ಪ್ಯೆಪ್ಲೋಟಿಇಲ್ಲದಂತೆ ಕೊಡುತ್ತಾ ಇದ್ದೇವೆ. ಪಂಜಾಬಿನಲ್ಲಿ ರುವ ವಿಷಯ ಹೇಳುವುದಾದರೆ ಅಲ್ಲಿ ಸ್ಪೇಟ್ ಮಾರ್ಕೆಟಿಂಗ್ ಸೊಸೈಟಿಗೆ ಮಾನಾಪಲ ಇದೆ. ಅಲ್ಲಿ ಅವರು ಪ್ಯೆಪ್ಲೋಟಿಯನ್ನು ಈಗ ಬಿಚ್ಚಿದ್ದಾರೆ. ಅದರೂ ನ್ಯಾಯ ದೊರಕಿಲ್ಲ. ಇಲ್ಲಿ ಇರುವ ಫರ್ಟಿ ಲೈಜರ್ಸ್ ಕ್ವಾಲಿಟಿ ಏನೂ ಡಿಟೆರಿಯರೇಟ್ ಆಗಿಲ್ಲ. ಮೊದಲಿದ್ದಂತೆಯೇ ಅದರ ಕ್ವಾಲಿಟಿ ಇದೆಯೆಂದು ಹೇಳುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗ ಅದನ್ನು ಪರೀಕ್ಷೆ ಮಾಡಿಸಿದ್ದೀರಾ ?

ಶ್ರೀ ಬಿ.ಎಲ್. ಗೌಡ. - ಅದನ್ನು ಪರೀಕ್ಷೆ ಮಾಡಿಸಿದ ಮೇಲೆಯೇ ನಾನು ಹೇಳುತ್ತಾ ಇರುವುದು. ಒಬ್ಬ ಸದಸ್ಯರು ಪ್ರತಿಯೊಂದು ಕ್ವಿಂಟಾಲಿನಿಂದ ಹಣವನ್ನು ಷೇರ್ ಕ್ಯಾಪಿಟಲ್‌ಗೋಸ್ಕರ ಪಡೆದಿದ್ದಾರೆಂದು ಹೇಳಿದ್ದಾರೆ. ನರ್ಕಾರವು ನೀತಿ ಆ ರೀತಿಯಾಗಿಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ದಯವಿಟ್ಟು ಅದನ್ನು ವೆರಿಫೈಮಾಡಿ ಮುಂದಿನ ಸಾರಿ ಹೇಳಲಿ. ಅದು ಅವರಿಗೇ ಚೆನ್ನಾಗಿ ಗೊತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದುಸಾರಿ ವಿಚಾರಣೆ ಮಾಡಿ ಅದರ ಬಗ್ಗೆ ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅಗಲಿ. ಒಟ್ಟಿನಲ್ಲಿ ಗೊಬ್ಬರ ವ್ಯಾಪಾರದಲ್ಲಿ ಇಲ್ಲಿ ಯಾವ ವಿಧವಾದ ಅನ್ಯಾಯವೇನೂ ನಡೆದಿಲ್ಲ. ರೈತರಿಗೆ ಉಪಕಾರಮಾಡುವ ಉದ್ದೇಶದಿಂದ ಮತ್ತು ಹೆಚ್ಚುಹೆಚ್ಚಿಗೆ ಆಹಾರವನ್ನು ಬೆಳೆಯುವ ಉದ್ದೇಶದಿಂದ ಎಲ್ಲಿ ಫರ್ಟಿಲೈಜರುಗಳ ಸ್ಕೇರ್ಸಿಟಿ ಇರುತ್ತದೋ ಅಲ್ಲಿ ಅದನ್ನು ಸ್ಟಾಕ್ ಮಾಡಿದ್ದೇವೆ. ಇದನ್ನು ನಂಯಾಗಿ ದೇಶದಲ್ಲಿ ವಿಲೇವಾರಿ ಮಾಡುವುದಕ್ಕೋಸ್ಕರ ಇವುಗಳ ಬೆಲೆಯನ್ನು ಕಡಿಮೆಮಾಡಿದ್ದೇವೆ. ಇನ್ನು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ವಿತರಣೆಗೋಸ್ಕರ ನರಿಯಾದಂಥ ಏಪರ್ಾಡುಗಳನ್ನು ಮಾಡಿದ್ದೇವೆ. ಒಟ್ಟಿನಲ್ಲಿ ಈ ನಹಕಾರ ನಂಘಗಳು ಇನ್ನು ಮುಂದೆ ನ್ಯಾಯವಾಗಿ ನಡೆದುಕೊಳ್ಳುವ ಹಾಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂ೦ಬ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಅವರ ದೂರದೃಷ್ಟಿ ಹೇಗಿದೆಯೆಂದರೆ, ಈಗ ಕ್ಷಾಮ ಡಾಮರಗಳು ಪ್ರತಿವರ್ಷವೂ ಬರುವುದರಿಂದ ಆಹಾರಧಾನ್ಯಗಳು ಹೆಚ್ಚಿಗೆ ಸಿಗದೇ ಹೋಗುವಾಗ ಮುಂದೆ ಜನರು ರಾಸಾಯನಿಕ ಗೊಬ್ಬರವನ್ನಾದರೂ ತಿಂದು ಬದುಕಲಿ ಎಂದು ಈ ರೀತಿ ಅವರು ಹೇಳಿದ್ದಾರೆಂದು ನನಗೆ ಭಾಸವಾಗುತ್ತದೆ.

Mr. DEPUTY SPEAKER.—The House will now adjourn and meet tomorrow at 8-30 A. M.

---

*The House adjourned at Ten Minutes past Eight of the Clock to meet again at Thirty Minutes past Eight of the Clock on Saturday, the 31st January 1970.*

---

Government ... 487?
ಚಿಕ್ಕಬಳ್ಳಾಪುರ ...
ಬೆಂಗಳೂರು ...

DW 14641—GPB—520—21-7-1970